# www.karunaduexams.com

**ಪ್ರಚಲಿತ ವಿದ್ಯಮಾನಗಳು - ನವೆಂಬರ್ 2017**

www.karunaduexams.com

# Contents

**ಅಂತರ್ ರಾಷ್ಟ್ರೀಯ** ........ 2
**ಪ್ರಶಸ್ತಿಗಳು** ........ 6
**ಪರಿಸರ** ........ 9
**ವ್ಯವಹಾರ** ........ 9
**ರಾಷ್ಟ್ರೀಯ** ........ 13
**ವಿಜ್ಞಾನ-ತಂತ್ರಜ್ಞಾನ** ........ 24
**ಕ್ರೀಡೆ** ........ 25
**ರಾಜ್ಯ** ........ 26
**ಇತರೆ: ಚೂರು ಪಾರು** ........ 29

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ,
WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mohan Kumar: Mobile: +91- 98805 33259 (Content related queries)

Chandrashekhar Nayak: Mobile: +91-9448880551 / 9844915689(Technical and Marketing related queries)

Ramakant: Mobile: +91-9972355744(Management related queries)

www.karunaduexams.com

# ಅಂತರ್ ರಾಷ್ಟ್ರೀಯ

**ಇಂದ್ರಾ 2017: ಭಾರತ-ರಷ್ಯಾ ನಡುವೆ ಮೂರು ಸೇವೆಗಳ ಜಂಟಿ ಸಮರಾಭ್ಯಾಸ ಮುಕ್ತಾಯ**



ಭಾರತ ಮತ್ತು ರಷ್ಯಾ ನಡುವಿನ ಮೂರು ಸೇವೆಗಳ ಜಂಟಿ ಸಮರಾಭ್ಯಾಸ "ಇಂದ್ರಾ 2017" ರಷ್ಯಾದ ಪೂರ್ವ ತೀರದಲ್ಲಿರುವ ಮತ್ತು ಪೆಸಿಫಿಕ್ ಸಾಗರದ ಮುಖ್ಯ ಬಂದರು ನಗರವಾಗಿರುವ ವ್ಲಾಡಿವೋಸ್ಟೋಕ್‌ನಲ್ಲಿ ಅಕ್ಟೋಬರ್ 19 ರಿಂದ ಅಕ್ಟೋಬರ್ 29 ರವರೆಗೆ ಯಶಸ್ವಿಯಾಗಿ ನಡೆಯಿತು. ಇದೇ ಮೊದಲ ಬಾರಿಗೆ ರಷ್ಯಾ ತನ್ನ ನೆಲದಲ್ಲಿ ಮೂರು ಸೇವೆಗಳ ಕಾರ್ಯಾಚರಣೆಯನ್ನು ಹಮ್ಮಿಕೊಂಡಿತ್ತು. 'Preparation and Conduct of Operations by Joint Force for Suppression of International Terror Activity at the request of a host country under UN mandate ಇದು ಈ ವರ್ಷದ ಥೀಮ್.

- ಈ ಸಮರಾಭ್ಯಾದಲ್ಲಿ ಭಾರತದ ಮೂರೂ ಸಶಸ್ತ್ರ ಪಡೆಗಳಾದ ಭೂಸೇನೆ, ವಾಯುಸೇನೆ ಮತ್ತು ನೌಕಾ ಸೇನೆಯ 400ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದು, ರಷ್ಯಾದ ಸೇನೆಯ ಸಾವಿರ ತುಕಡಿಗಳು ಈ ಅಭ್ಯಾಸದಲ್ಲಿ ಪಾಲ್ಗೊಂಡಿವೆ.
- ಕಾರ್ಯಕ್ರಮದ ಆರಂಭದ ಅಂಗವಾಗಿ ನಡೆದ ಆಕರ್ಷಕ ಪಥಸಂಚಲನದಲ್ಲಿ ಎರಡೂ ರಾಷ್ಟ್ರಗಳ ಭೂ ಸೇನೆ, ವಾಯು ಸೇನೆ ಹಾಗೂ ನೌಕಾಪಡೆಗಳ ಸೈನಿಕರು ಜತೆಯಾಗಿ ಸಾಗಿದರು. ಬಳಿಕ ಭಾರತೀಯ ಯೋಧರಿಂದ ಸಾಂಪ್ರದಾಯಿಕ ಸಾಹಸ ಕಲೆಗಳ ಪ್ರದರ್ಶನ ಮತ್ತು ಕಲಾವಿದರಿಂದ ಸಾಂಸ್ಕೃತಿಕ ಪ್ರದರ್ಶನ ನಡೆದವು.
- ಭಾರತೀಯ ಸೇನೆಯಿಂದ 450 ಸಿಬ್ಬಂದಿ ಹಾಗೂ ರಷ್ಯಾದ ಕಡೆಯಿಂದ 1000ಕ್ಕೂ ಹೆಚ್ಚು ಸೇನಾ ತುಕಡಿಗಳು ಪಾಲ್ಗೊಂಡಿವೆ. ಉಭಯ ದೇಶಗಳ ಗಡಿಗಳಲ್ಲಿ ಆಗುತ್ತಿರುವ ಅಕ್ರಮ ಒಳನುಸುಳುವಿಕೆಯಂಥ ಪ್ರಯತ್ನಗಳನ್ನು ನಿಗ್ರಹಿಸುವ ಬಗ್ಗೆ ಈ ಸಮರಾಭ್ಯಾಸದಲ್ಲಿ ಹೆಚ್ಚಿನ ಒತ್ತು ನೀಡಲಾಗುತ್ತಿದೆ.
- "ಭಾರತ ಹಾಗೂ ರಷ್ಯಾಗಳು ತಮ್ಮ ಗಡಿ ಭಾಗಗಳಲ್ಲಿ ಒಂದೇ ತೆರನಾದ ಸಮಸ್ಯೆಗಳನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಈ ಸಮರಾಭ್ಯಾಸ ನಡೆಸಲಾಗುತ್ತಿದೆ. ಇದು ಎರಡೂ ರಾಷ್ಟ್ರಗಳ ಸೈನಿಕರು ಈ ಸಮಸ್ಯೆಗಳನ್ನು ಎದುರಿಸುವಲ್ಲಿ ಪಡೆದಿರುವ ಅನುಭವ, ಜ್ಞಾನವನ್ನು ಹಂಚಿಕೊಳ್ಳಲು ಸಹಾಯ ಮಾಡುತ್ತದೆ.

**ಹಿನ್ನಲೆ**:

ಇಂದ್ರ ಸಮರಾಭ್ಯಾಸವನ್ನು 2003 ರಿಂದ ಆಯೋಜಿಸಲಾಗುತ್ತಿದೆ. ಇಂದ್ರ ಎಂದರೆ INDia ಮತ್ತು RussiA ಎಂದರ್ಥ.

## **ಭಾರತ ಮತ್ತು ಕಝಾಕಿಸ್ತಾನ ನಡುವಿನ ಜಂಟಿ ಮಿಲಿಟರಿ ಸಮರಾಭ್ಯಾಸ ಪ್ರಬಲ ದೋಸ್ತಿಕ್ ಪ್ರಾರಂಭ**



ಭಾರತ ಮತ್ತು ಕಝಾಕಿಸ್ತಾನ್ ನಡುವಿನ ದ್ವಿಪಕ್ಷೀಯ ಮಿಲಿಟರಿ ವ್ಯಾಯಾಮ "ಪ್ರಬಲ್ ದೋಸ್ತಿಕ್ - 2017" ಹಿಮಾಚಲ ಪ್ರದೇಶದ ಬಕ್ಲೊದಲ್ಲಿ ಆರಂಭಗೊಂಡಿದೆ. 'ಪ್ರಬಲ್ ದೋಸ್ತಿಕ್' ಎಂದರೆ ದೃಢವಾದ ಸ್ನೇಹ ಎಂದರ್ಥ.

ಉಭಯ ದೇಶಗಳ ನಡುವೆ ನಡೆಯುತ್ತಿರುವ ಎರಡನೇ ಮಿಲಿಟರಿ ಸಮರಾಭ್ಯಾಸ ಇದಾಗಿದೆ. ಪ್ರಬಲ ದೋಸ್ತಿಕ್ ಅಭ್ಯಾಸದ ಮೊದಲ ಆವೃತಿ ಕಝಾಕಸ್ತಾನದ ಕರಗಂಡದಲ್ಲಿ ಸೆಪ್ಟೆಂಬರ್ 2016ರಲ್ಲಿ ನಡೆದಿತ್ತು.

- ಹದಿನಾಲ್ಕು ದಿನ ನಡೆಯುವ ಜಂಟಿ ತರಬೇತಿಯಲ್ಲಿ ದ್ವಿಪಕ್ಷೀಯ ಸೇನಾ ಸಂಬಂಧಗಳು ಮತ್ತು ಭಾರತ ಹಾಗೂ ಕಝಾಕಿಸ್ತಾನ್ ನಡುವೆ ಕೌಶಲ್ಯ ವಿನಿಮಯ ಮತ್ತು ಅನುಭವಗಳನ್ನು ಹಂಚಿಕೆಗಳನ್ನು ವೇದಿಕೆ ಕಲ್ಪಿಸಲಿದೆ.
- ಅಲ್ಲದೇ ಎರಡು ದೇಶಗಳ ನಡುವೆ ಸೇನಾ ಸಂಬಂಧವನ್ನು ಉತ್ತಮಗೊಳಿಸಲು ಇದು ಸಹಕಾರಿಯಾಗಲಿದೆ.
- ತರಬೇತಿಯಲ್ಲಿ ಭಾರತೀಯ ಸೇನೆಯ 11 ನೇ ಗೂರ್ಖಾ ರೈಫಲ್ಸ್ ಪಡೆಗಳು ಮತ್ತು ಕಝಾಕಿಸ್ತಾನ್ ಸೈನ್ಯದ ಸರಿ ಸಮಾನ ತುಕಡಿಗಳು ಭಾಗವಹಿಸಲಿವೆ.
- ಭಯೋತ್ಪಾದಕತೆ ಹತ್ತಿಕ್ಕುವುದು, ಒಳನುಸುಳುವಿಕೆ ತಡೆಯುವ ಕಾರ್ಯಾಚರಣೆ ಬಗ್ಗೆ ತರಭೇತಿ ನೀಡಲಾಗುವುದು.

## **ಜಾಗತಿಕ ಲಿಂಗ ಅಸಮಾನತೆ ಸೂಚ್ಯಂಕದಲ್ಲಿ ಭಾರತಕ್ಕೆ 108ನೇ ಸ್ಥಾನ**



RANKING ON GLOBAL GENDER GAP

| | 2015 | 2016 |
|---|---|---|
| Iceland | 1 | 1 |
| Finland | 3 | 2 |
| Norway | 2 | 3 |
| Sweden | 4 | 4 |
| Rwanda | 6 | 5 |
| India | 108 | 87 |

ವಿಶ್ವ ಆರ್ಥಿಕ ವೇದಿಕೆ (WEF) ಪ್ರಕಟಿಸಿರುವ ಜಾಗತಿಕ ಲಿಂಗ ಅಸಮಾನತೆ (ಗ್ಲೋಬಲ್ ಜೆಂಡರ್ ) ಸೂಚ್ಯಂಕದಲ್ಲಿ ಭಾರತ 144 ದೇಶಗಳ ಪಟ್ಟಿಯಲ್ಲಿ 108ನೇ ಸ್ಥಾನವನ್ನು ಪಡೆದುಕೊಂಡಿದೆ. ಸೂಚ್ಯಂಕದಲ್ಲಿ ಭಾರತ ಈ ವರ್ಷ 21 ಸ್ಥಾನಗಳ ಕುಸಿತ ಕಂಡಿದೆ. ಕಳೆದ ವರ್ಷ ಸೂಚ್ಯಂಕದಲ್ಲಿ 87ನೇ ಸ್ಥಾನವನ್ನು ಪಡೆದುಕೊಂಡಿತ್ತು. ವಿಶ್ವ ಆರ್ಥಿಕ ವೇದಿಕೆಯು ನಾಲ್ಕು ಕ್ಷೇತ್ರಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ವಿಶ್ಲೇಷಿಸಿ ಈ ಸೂಚ್ಯಂಕ ಸಿದ್ದಪಡಿಸಿದೆ. ನಾಲ್ಕು ಕ್ಷೇತ್ರಗಳೆಂದರೆ ಆರೋಗ್ಯ. ಶಿಕ್ಷಣ, ಉದ್ಯೋಗ ಕ್ಷೇತ್ರ ಮತ್ತು ರಾಜಕೀಯ ಪ್ರಾತಿನಿಧ್ಯ.

www.karunaduexams.com

**ಭಾರತದ ಕಳಪೆ ಸಾಧನೆಗೆ ಕಾರಣ**:

ಭಾರತದ ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಅವಕಾಶಗಳು ಕಡಿಮೆಯಾಗಿರುವುದು ಹಾಗೂ ಆರೋಗ್ಯ ವಿಚಾರದಲ್ಲಿ ಅಂದರೆ ಈಗಲೂ ಗಂಡು ಮಕ್ಕಳಿಗೆ ಆಸಕ್ತಿ ತೋರುವ ಕಾರಣ ಕುಸಿಯುತ್ತಿರುವ ಲಿಂಗಾನುಪಾತ ಸೂಚ್ಯಂಕದಲ್ಲಿ ಭಾರತ ಕಡಿಮೆ ಸ್ಥಾನಗೊಳಿಸಲು ಕಾರಣವಾಗಿದೆ.

- ಭಾರತದ ನೆರೆಯ ರಾಷ್ಟ್ರಗಳಾದ ಬಾಂಗ್ಲಾದೇಶ (47) ಮತ್ತು ಚೀನಾ (100) ಭಾರತಕ್ಕಿಂತ ಮೇಲಿನ ಸ್ಥಾನದಲ್ಲಿವೆ.
- ಸೂಚ್ಯಂಕ ಪಟ್ಟಿಯಲ್ಲಿ ಐಸ್‌ಲ್ಯಾಂಡ್ ಮೊದಲ ಸ್ಥಾನದಲ್ಲಿದೆ. ಸತತವಾಗಿ ಒಂಬತ್ತು ವರ್ಷಗಳಿಂದ ಐಸ್ ಲ್ಯಾಂಡ್ ಪಟ್ಟಿಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡು ಬರುತ್ತಿದೆ.
- ಆರ್ಥಿಕ ಚಟುವಟಿಕೆ, ಉದ್ಯೋಗ, ಆರೋಗ್ಯ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ವಿಚಾರದಲ್ಲಿ ಭಾರತದ ಮುಂದೆ ಬಹುದೊಡ್ಡ ಸವಾಲು ಇದೆ ಎಂದು ಸೂಚ್ಯಂಕ ವರದಿ ಹೇಳಿದೆ. ಉದ್ಯೋಗ ಕ್ಷೇತ್ರದಲ್ಲಿ ಭಾರತ 139ನೇ ರ್‍ಯಾಂಕ್ ಗಳಿಸಿದ್ದರೆ, ಆರೋಗ್ಯ ಕ್ಷೇತ್ರದಲ್ಲಿ 141ನೇ ರ್‍ಯಾಂಕ್ ಪಡೆದುಕೊಂಡಿದೆ.
- ಭಾರತದ ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಭಾರಿ ಪ್ರಮಾಣದಲ್ಲಿ ಕಡಿಮೆ ಇರುವುದರಿಂದ ಮತ್ತು ಉದ್ಯೋಗದಲ್ಲಿರುವ ಮಹಿಳೆಯರಿಗೆ ಕಡಿಮೆ ವೇತನ ನೀಡುತ್ತಿರುವುದರಿಂದ ಉದ್ಯೋಗ ಕ್ಷೇತ್ರದಲ್ಲಿ ಲಿಂಗ ಅಸಮಾನತೆ ಹೆಚ್ಚಾಗಿದೆ. ಕೆಲಸ ಮಾಡುತ್ತಿರುವ ಮಹಿಳೆಯರಲ್ಲಿ ಸರಾಸರಿ ಶೇ 68 ಮಂದಿಗೆ ವೇತನವೇ ನೀಡಲಾಗುತ್ತಿಲ್ಲ. ಪುರುಷರಲ್ಲಿ ಶೇ 12ರಷ್ಟು ಮಂದಿಗೆ ಸಂಬಳ ಸಿಗುತ್ತಿಲ್ಲ' ಎಂದು ವಿವರಿಸಿದೆ.

**ಟಾಪ್ ಹತ್ತು ರಾಷ್ಟ್ರಗಳು:**

ಐಸ್‌ಲ್ಯಾಂಡ್**,** ನಾರ್ವೆ**,** ಫಿನ್‌ಲ್ಯಾಂಡ್**,** ರುವಾಂಡ**,** ಸ್ವೀಡನ್**,** ನಿಕರಾಗುವ**,** ಸ್ಲೊವೇನಿಯಾ**,** ಐರ್ಲೆಂಡ್**,** ನ್ಯೂಜಿಲೆಂಡ್ ಮತ್ತು ಫಿಲಿಪ್ಪೀನ್ಸ್.

www.karunaduexams.com

## ಪಾಕಿಸ್ತಾನದ ನೂತನ ಪ್ರಧಾನಿಯಾಗಿ **ಶಾಹಿದ್ ಖಕಾನ್ ಅಬ್ಬಾಸಿ ಆಯ್ಕೆ**



ಪಾಕಿಸ್ತಾನದ ನೂತನ ಪ್ರಧಾನಿಯಾಗಿ ಪಿಎಂಎಲ್–ಎನ್ ಹಿರಿಯ ಮುಖಂಡ ಶಾಹಿದ್ ಖಕಾನ್ ಅಬ್ಬಾಸಿ ಅವರನ್ನು ಅಲ್ಲಿನ ಸಂಸತ್ತಿನಲ್ಲಿ ಮತದಾನದ ಮೂಲಕ ಆಯ್ಕೆ ಮಾಡಲಾಗಿದೆ.
ಪನಾಮಾ ಪೇಪರ್ಸ್ ಪ್ರಕರಣದಲ್ಲಿ ಪಾಕಿಸ್ತಾನದ ಸುಪ್ರೀಂಕೋರ್ಟ್ ದೋಷಿ ಎಂದು ತೀರ್ಪು ನೀಡಿದ್ದರಿಂದ ಹಿಂದಿನ ಪ್ರಧಾನಿ ನವಾಜ್ ಷರೀಫ್ ಅವರು ಶುಕ್ರವಾರ ಹುದ್ದೆಗೆ ರಾಜೀನಾಮೆ ನೀಡಿದ್ದರು. ನಂತರ ಅಬ್ಬಾಸಿ ಅವರನ್ನು ಹಂಗಾಮಿ ಪ್ರಧಾನಿಯನ್ನಾಗಿ ಆಯ್ಕೆ ಮಾಡಲಾಗಿತ್ತು.
342 ಸದಸ್ಯಬಲದ ಪಾಕಿಸ್ತಾನ ಸಂಸತ್ತಿನಲ್ಲಿ ಮಂಗಳವಾರ ನಡೆದ ಮತದಾನದಲ್ಲಿ ಅಬ್ಬಾಸಿ ಪರ 221 ಮತ ಚಲಾವಣೆಯಾಗಿವೆ. ಪ್ರತಿಸ್ಪರ್ಧಿ, ಪಾಕಿಸ್ತಾನ್ ಪೀಪಲ್ಸ್ ಪಕ್ಷದ ನವೀದ್ ಖಮರ್ ಪರ ಕೇವಲ 47 ಮತ ಚಲಾವಣೆಯಾಗಿವೆ.
ಅಬ್ಬಾಸಿ ಅವರು ಪ್ರಧಾನಿಯಾಗಿ ಆಯ್ಕೆಯಾಗಿರುವುದನ್ನು ಸ್ಪೀಕರ್ ಸರ್ದಾರ್ ಆಯಾಜ್ ಸಾದಿಕ್ ಘೋಷಿಸಿದರು. ಜತೆಗೆ, ಪ್ರಧಾನಿ ಸ್ಥಾನ ಅಲಂಕರಿಸಿ ಸದನವನ್ನು ಉದ್ದೇಶಿಸಿ ಮಾತನಾಡುವಂತೆ ಅಬ್ಬಾಸಿ ಅವರಿಗೆ ಸೂಚಿಸಿದರು.

www.karunaduexams.com

# ಪ್ರಶಸ್ತಿಗಳು

**<u>ಹಿಂದಿ ಲೇಖಕಿ ಕೃಷ್ಣಾ ಸೋಬತಿ ಅವರಿಗೆ 2017 ಜ್ಞಾನಪೀಠ ಪ್ರಶಸ್ತಿ</u>**



ಹಿಂದಿ ಲೇಖಕಿ ಕೃಷ್ಣಾ ಸೋಬತಿ ಅವರಿಗೆ 53ನೇ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿನ ಸಮಗ್ರ ಕೊಡುಗೆಯನ್ನು ಪರಿಗಣಿಸಿ ಕೃಷ್ಣಾ ಸೋಬತಿ ಅವರಿಗೆ ಪ್ರಶಸ್ತಿ ನೀಡಲಾಗಿದೆ. ಸೋಬತಿ ರವರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡ ಮಹಿಳೆಯರ ಪಟ್ಟಿಯಲ್ಲಿ ಎಂಟನೇಯವರು.

**ಕೃಷ್ಣಾ ಸೋಬತಿ**:

ಕೃಷ್ಣಾ ಸೋಬತಿ ರವರು ಫೆಬ್ರುವರಿ 18, 1925ರಲ್ಲಿ ಗುಜರಾತ್ ಪಂಜಾಬ್ ನಲ್ಲಿ(ಈಗಿನ ಪಾಕಿಸ್ತಾನ) ಜನಿಸಿದರು. ಆದರೆ ಅವರ ಶಿಕ್ಷಣ ನಡೆದಿದ್ದು ದೆಹಲಿ ಮತ್ತು ಶಿಮ್ಲಾದಲ್ಲಿ. ಹಶ್ಮತ್ ಎಂಬ ಕಾವ್ಯನಾಮದಲ್ಲಿ ಇವರು ಕವಿತೆಗಳನ್ನು ಬರೆದಿದ್ದಾರೆ. ಕೃಷ್ಣಾ ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಲಭಿಸಿದೆ. 2010ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲು ತೀರ್ಮಾನಿಸಿದ್ದರೂ,

ದಾರ್ ಸೇ ಬಿಚುಡಿ, ಮಿತ್ರೊ ಮರ್ಜನಿ, ಜಿಂದಗೀನಾಮ, ದಿಲ್ ಓ ದನೀಶ್, ಬಾದಲೋಂಖೆ ಘೇರೇ, ಏ ಲಡ್ಕೀ ಮತ್ತು ಗುಜರಾತ್ ಪಾಕಿಸ್ತಾನ್ ಸೇ ಗುಜರಾತ್ ಹಿಂದೂಸ್ತಾನ್ ಮೊದಲಾದುವು ಇವರ ಪ್ರಮುಖ ಕೃತಿಗಳು. ಇವರ ಹಲವಾರು ಕೃತಿಗಳು ಭಾರತೀಯ ಭಾಷೆ ಸೇರಿದಂತೆ ಸ್ವೀಡಿಷ್, ರಷ್ಯನ್ ಮತ್ತು ಇಂಗ್ಲಿಶ್ ಭಾಷೆಗಳಿಗೆ ಅನುವಾದಗೊಂಡಿವೆ.

**ಜ್ಞಾನ ಪೀಠ ಪ್ರಶಸ್ತಿ**:

ಜ್ಞಾನಪೀಠ ಪ್ರಶಸ್ತಿ ಭಾರತದ ಸಾಹಿತಿಗಳಿಗೆ ಸಲ್ಲುವ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ. ಈ ಪ್ರಶಸ್ತಿಯು ಭಾರತದ ಸಂವಿಧಾನದ ಎಂಟನೆ ಅನುಚ್ಛೇದದಲ್ಲಿ ಉಲ್ಲೇಖವಾಗಿರುವ ಭಾಷೆಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಯನ್ನು ಅಥವಾ ಸಮಗ್ರ ಸಾಹಿತ್ಯದ ಕೊಡುಗೆಯನ್ನು ನೀಡಿದ ಭಾರತೀಯ ನಾಗರಿಕನಿಗೆ ಲಭಿಸುವುದು. ಸಾಹು ಜೈನ್ ಪರಿವಾರದವರು, ಈ ಪ್ರಶಸ್ತಿಯನ್ನು ಮೇ 22, 1961 ರಲ್ಲಿ ಸ್ಥಾಪಿಸಿದರು. ಈ ಪ್ರಶಸ್ತಿಯನ್ನು ಪ್ರಪ್ರಥಮವಾಗಿ ೧೯೬೫ರಲ್ಲಿ ಮಲೆಯಾಳಂ ಲೇಖಕ ಜಿ. ಶಂಕರ ಕುರುಪರಿಗೆ ಪ್ರದಾನ ಮಾಡಲಾಯಿತು. ವಿಜೇತರಿಗೆ ಪ್ರಶಸ್ತಿ ಫಲಕ, 11 ಲಕ್ಷ ರುಪಾಯಿ ಚೆಕ್ ಹಾಗು ವಾಗ್ದೇವಿಯ ಕಂಚಿನ ವಿಗ್ರಹವನ್ನು ನೀಡಿ ಗೌರವಿಸಲಾಗುವುದು.

www.karunaduexams.com

## ನೊಬೆಲ್ ಪ್ರಶಸ್ತಿ ಸರಣಿ ಎರಡನೇ ಆವೃತ್ತಿ ಆತಿಥ್ಯ ವಹಿಸಲಿರುವ ಗೋವಾ



ಗೋವಾ ಸರ್ಕಾರವು ನೊಬೆಲ್ ಪ್ರಶಸ್ತಿ ಸರಣಿಯ ಎರಡನೇ ಆವೃತ್ತಿ ಆತಿಥ್ಯವಹಿಸಲು ಬಯೋಟೆಕ್ನಾಲಜಿ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಮತ್ತು ಸ್ವೀಡನಿನ ನೊಬೆಲ್ ಮೀಡಿಯಾದೊಂದಿಗೆ ತ್ರಿವಳಿ ಒಡಂಬಡಿಕೆ ಒಪ್ಪಂದಕ್ಕೆ (MoU) ಸಹಿ ಮಾಡಿದೆ. ಈ ಕಾರ್ಯಕ್ರಮವನ್ನು ಜಂಟಿಯಾಗಿ ಜೈವಿಕ ತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ಸ್ವೀಡನಿನ ನೊಬೆಲ್ ಮೀಡಿಯಾದ ಸಹಕಾರದೊಂದಿಗೆ ಗೋವಾ ಸರ್ಕಾರ ಆಯೋಜಿಸುತ್ತಿದೆ. ಫೆಬ್ರುವರಿ 2018ರಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗುವುದು.

## ತಮಿಳುನಾಡು ರಂಗನಾಥಸ್ವಾಮಿ ದೇವಸ್ಥಾನಕ್ಕೆ ಯುನೆಸ್ಕೋ ಪ್ರಶಸ್ತಿ



ತಮಿಳುನಾಡಿನ ಶ್ರೀರಂಗಂನಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಾಲಯವು ಸಾಂಸ್ಕೃತಿಕ ಪರಂಪರೆ ಸಂರಕ್ಷಣಾ ಕಾರ್ಯಕ್ರಮಕ್ಕಾಗಿ ಯುನೆಸ್ಕೋ ಏಷ್ಯಾ-ಪೆಸಿಫಿಕ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ವಿಶ್ವಸಂಸ್ಥೆಯಿಂದ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದುಕೊಂಡ ತಮಿಳುನಾಡಿನ ಮೊದಲ ದೇವಾಲಯ ಇದಾಗಿದೆ. ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಸಂರಕ್ಷಣೆಗಾಗಿ ದೇವಾಲಯದ ಪ್ರಯತ್ನವನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ದೇವಾಲಯದ ಆವರಣವನ್ನು ನವೀಕರಿಸಿರುವ ಸಾಂಪ್ರದಾಯಿಕ ವಿಧಾನ ಮತ್ತು ಮಳೆನೀರು ಕೊಯ್ಲು ಹಾಗೂ ಐತಿಹಾಸಿಕ ಒಳಚರಂಡಿ ವ್ಯವಸ್ಥೆಯನ್ನು ಪುನರ್ ಸ್ಥಾಪಿಸಿರುವ ಪ್ರಯತ್ನಕ್ಕಾಗಿ ಪ್ರಶಸ್ತಿಯನ್ನು ನೀಡಲಾಗಿದೆ.

**ಪ್ರಶಸ್ತಿಯ ಬಗ್ಗೆ:**

UNESCO ಸಾಂಸ್ಕೃತಿಕ ಪರಂಪರೆ ಸಂರಕ್ಷಣಾ ಕಾರ್ಯಕ್ರಮಕ್ಕಾಗಿ ಪ್ರಶಸ್ತಿಗಳನ್ನು 2000ರಲ್ಲಿ ಪ್ರಾರಂಭಿಸಲಾಯಿತು. ಪ್ರಶಸ್ತಿಯನ್ನು ನಾಲ್ಕು ವಿಭಾಗಗಳಲ್ಲಿ ಅಂದರೆ ಅವಾರ್ಡ್ ಆಫ್ ಎಕ್ಸಲೆನ್ಸ್, ಅವಾರ್ಡ್ ಆಫ್ ಡಿಸ್ಟಿಂಕ್ಷನ್, ಅವಾರ್ಡ್ ಆಫ್ ಮೆರಿಟ್ ಮತ್ತು ಅವಾರ್ಡ್ ಫಾರ್ ನ್ಯೂ ಡಿಸೈನ್ ನೀಡಲಾಗುತ್ತಿದೆ. ಅವಾರ್ಡ್ ಆಫ್ ಮೆರಿಟ್ ವಿಭಾಗದಲ್ಲಿ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಪ್ರಶಸ್ತಿಯನ್ನು ನೀಡಲಾಗಿದೆ.

www.karunadu exams.com

## ಶ್ರೀರಂಗನಾಥಸ್ವಾಮಿ ದೇವಸ್ಥಾನ:

ಇದು ದಕ್ಷಿಣ ಭಾರತದ ಅತ್ಯಂತ ವೈಭವ ಭರಿತ ವೈಷ್ಣವ ದೇವಾಲಯಗಳಲ್ಲಿ ಒಂದಾಗಿದೆ. ಸಂಗಮ್ ಸಾಹಿತ್ಯ ಯುಗದ ಮುಂಚೆಯೇ ಇದರ ಬಗ್ಗೆ ತಮಿಳು ಸಾಹಿತ್ಯದಲ್ಲಿ ಉಲ್ಲೇಖಿಸಲಾಗಿದೆ. ಈ ದೇವಾಲಯವು ಭಾರತದ ಪ್ರಾಚೀನ ಇತಿಹಾಸದ ನಿಧಿಯನ್ನು ಹೊಂದಿದೆ. ಇದನ್ನು ತಮಿಳು ಅಥವಾ ದ್ರಾವಿಡ ಶೈಲಿಯ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗಿದೆ. ದಂತಕತೆಗಳ ಪ್ರಕಾರ ಇದು 108 ಪ್ರಮುಖ ವಿಷ್ಣುವಿನ ದೇವಾಲಯಗಳಲ್ಲಿ ಒಂದಾಗಿದೆ.

ತಿರುವರಂಗ ತಿರುಪತಿ, ಭೂಲೋಕ ವೈಕುಂಡಂ, ಪೆರಿಯಾಕೋಯಿಲ್, ಭೋಗಮಂಡಬಾಮ್ ಮುಂತಾದ ಹಲವಾರು ಹೆಸರುಗಳಿಂದ ದೇವಾಲಯವನ್ನು ಕರೆಯಲಾಗುವುದು. ಈ ದೇವಾಲಯವು ಕಾವೇರಿ ಮತ್ತು ಕೋಲರೂನ್ ಎಂಬ ಎರಡು ನದಿಗಳಿಂದ ರೂಪುಗೊಂಡ ದ್ವೀಪದಲ್ಲಿ ನೆಲೆಗೊಂಡಿದೆ. ಇದರ ಸಂಕೀರ್ಣವು 156 ಎಕರೆಯಷ್ಟು ವಿಸ್ತಾರವಾಗಿದ್ದು, 4,116 ಮೀಟರ್ನಷ್ಟಿದೆ. ಇದು ಭಾರತದಲ್ಲಿನ ಅತಿದೊಡ್ಡ ದೇವಾಲಯ ಮತ್ತು ವಿಶ್ವದಲ್ಲೇ ಅತ್ಯಂತ ದೊಡ್ಡ ಧಾರ್ಮಿಕ ಸಂಕೀರ್ಣವಾಗಿದೆ.

## 2017ನೇ ಸಾಲಿನ ಡಿ. ದೇವರಾಜ ಅರಸು ಪ್ರಶಸ್ತಿಗೆ ಮಲ್ಲಿಕಾರ್ಜುನ ಖರ್ಗೆ ಆಯ್ಕೆ



ರಾಜ್ಯ ಸರ್ಕಾರ ಕೊಡಮಾಡುವ ಡಿ.ದೇವರಾಜ ಅರಸು ಪ್ರಶಸ್ತಿಯನ್ನು 2017ನೇ ಸಾಲಿಗೆ ಲೋಕಸಭೆಯಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕರಾಗಿರುವ ಎಂ.ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಯ್ಕೆ ಮಾಡಲಾಗಿದೆ. ಆಗಸ್ಟ 20ರಂದು ವಿಧಾನಸೌಧದಲ್ಲಿ ನಡೆಯಲಿರುವ ಡಿ.ದೇವರಾಜ ಅರಸು ಅವರ 102ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

- ಸಾಹಿತಿ ಹಂ.ಪ.ನಾಗರಾಜಯ್ಯ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಎಂ.ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು ಶಿಫಾರಸು ಮಾಡಿತ್ತು.
- ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ರಾಜಕೀಯ ಸೇವೆ ಮಾಡಿ ಹಾಗೂ ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡಿರುವ ಕಾರಣ ಖರ್ಗೆ ಅವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ಪ್ರಶಸ್ತಿಯು ಎರಡು ಲಕ್ಷ ರೂ. ನಗದು ಹಾಗೂ ಫಲಕ ಒಳಗೊಂಡಿದೆ.
- ಕಳೆದ ವರ್ಷ ಪ್ರಶಸ್ತಿಯನ್ನು ಬಿ.ಎಮೋಹಿದ್ದಿನ್ ಅವರಿಗೆ ನೀಡಲಾಗಿತ್ತು.

www.karunaduexams.com

# ಪರಿಸರ

# ವ್ಯವಹಾರ

**<u>ಸೆಪ್ಟೆಂಬರ್ 2017 ರಲ್ಲಿ ಕೈಗಾರಿಕೆಗಳ ಪ್ರಗತಿ ಆರು ತಿಂಗಳಲ್ಲಿ ಅಧಿಕ</u>**



ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬಿಡುಗಡೆ ಮಾಡಿದ ಎಂಟು ಪ್ರಮುಖ ಕೈಗಾರಿಕೆಗಳ ಸೂಚ್ಯಂಕದ ಪ್ರಕಾರ, ಮೂಲಸೌಕರ್ಯ ವಲಯದ ಪ್ರಮುಖ 8 ಕೈಗಾರಿಕೆಗಳ ಪ್ರಗತಿಯು ಸೆಪ್ಟೆಂಬರ್‌ನಲ್ಲಿ ಆರು ತಿಂಗಳಲ್ಲಿ ಗರಿಷ್ಠ ಬೆಳವಣಿಗೆಯಾಗಿದೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ತೈಲಾಗಾರ ವಲಯ, ರಸಗೊಬ್ಬರಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಒಳಗೊಂಡಿರುವ ಪ್ರಮುಖ ಉದ್ಯಮಗಳು ಸೆಪ್ಟಂಬರ್ ನಲ್ಲಿ ಶೇ 5.2% ರಷ್ಟು ಬೆಳವಣಿಗೆ ಕಂಡಿವೆ. ಆಗಸ್ಟ್ 2017 ರಲ್ಲಿ ಶೇ 4.4% ಬೆಳವಣಿಗೆ ದಾಖಲಾಗಿತ್ತು.

**ವಲಯವಾರು ಪ್ರಗತಿ:**

ಕಲ್ಲಿದ್ದಲು, ನೈಸರ್ಗಿಕ ಅನಿಲ ಮತ್ತು ಶುದ್ಧೀಕರಣ ಉತ್ಪನ್ನಗಳ ಉತ್ಪಾದನೆ ಕ್ರಮವಾಗಿ ಸೆಪ್ಟೆಂಬರ್ 2017 ರಲ್ಲಿ 10.6%, 6.3% ಮತ್ತು 8.1% ರಷ್ಟಿದೆ. ವಿದ್ಯುತ್ ಉತ್ಪಾದನೆಯು 5.2% ಮತ್ತು ಉಕ್ಕು ವಲಯ 3.7% ಬೆಳವಣಿಗೆ ದಾಖಲಾಗಿದೆ. ಕಚ್ಚಾ ಉತ್ಪಾದನೆ ಮತ್ತು ಸಿಮೆಂಟ್ ಉತ್ಪಾದನೆಯು ಶೇ 0.1 ರಷ್ಟು ಇದ್ದು, ರಸಗೊಬ್ಬರದ ಉತ್ಪಾದನೆ 7.7% ರಷ್ಟಿದೆ. ಈ ವಲಯವು ಉತ್ತಮ ಪ್ರಗತಿ ಸಾಧಿಸಿರುವುದರಿಂದ ಕೈಗಾರಿಕಾ ಪ್ರಗತಿ ಸೂಚ್ಯಂಕದ (ಐಐಪಿ) ಮೇಲೆ ಸಕಾರಾತ್ಮಕ ಪ್ರಭಾವ ಬೀರುವ ನಿರೀಕ್ಷೆ ವ್ಯಕ್ತವಾಗಿದೆ. ಈ 8 ಕೈಗಾರಿಕೆಗಳು ಕೈಗಾರಿಕಾ ಪ್ರಗತಿಯಲ್ಲಿ ಶೇ 41 ರಷ್ಟು ಪಾಲು ಹೊಂದಿವೆ.


**ಮೂಲ ಸೌಕರ್ಯ ವಲಯ**:

ಪ್ರಮುಖ ಸೌಕರ್ಯ ವಲಯವನ್ನು ಮುಖ್ಯ ಉದ್ಯಮ ಎಂದು ವ್ಯಾಖ್ಯಾನಿಸಬಹುದು. ಭಾರತದಲ್ಲಿ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಶುದ್ಧೀಕರಣ ಉತ್ಪನ್ನಗಳು, ರಸಗೊಬ್ಬರಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಸೇರಿದಂತೆ ಎಂಟು ಪ್ರಮುಖ ವಲಯಗಳಿವೆ.

www.karunaduexams.com

ವಿದ್ಯುತ್ ಗರಿಷ್ಠ ಪ್ರಮಾಣ (10.32%), ಉಕ್ಕು (6.68%), ತೈಲಾಗಾರ (5.94%), ಕಚ್ಚಾ ತೈಲ ಉತ್ಪಾದನೆ (5.22%), ಕಲ್ಲಿದ್ದಲು ಉತ್ಪಾದನೆ (4.38%), ಸಿಮೆಂಟ್ (2.41%), ನೈಸರ್ಗಿಕ ಅನಿಲ ಉತ್ಪಾದನೆ (1.71%) ಮತ್ತು ರಸಗೊಬ್ಬರ ಉತ್ಪಾದನೆ (1.25%).

## <u>ಸುಲಭ ವಹಿವಾಟು ವಿಶ್ವ ಸೂಚ್ಯಂಕ ಪಟ್ಟಿಯಲ್ಲಿ ಭಾರತಕ್ಕೆ 100ನೇ ಸ್ಥಾನ</u>




ವಿಶ್ವ ಬ್ಯಾಂಕ್ ಇತ್ತೀಚೆಗೆ ಬಿಡುಗಡೆ ಮಾಡಿರುವ "ಡುಯಿಂಗ್ ಬ್ಯುಸಿನೆಸ್ (ಡಿಬಿ) 2018: ರಿಫಾರ್ಮಿಂಗ್ ಟು ಕ್ರಿಯೇಟ್ ಜಾಬ್ಸ್" ಶೀರ್ಷಿಕೆಯ ವರದಿಯಲ್ಲಿ 190 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 100ನೇ ಸ್ಥಾನವನ್ನು ಪಡೆದುಕೊಂಡಿದೆ. 2017 ಸುಲಭ ವಹಿವಾಟು ವಿಶ್ವ ಸೂಚ್ಯಂಕ ಪಟ್ಟಿಯಲ್ಲಿ 130ನೇ ಸ್ಥಾನದಿಂದ 30 ಸ್ಥಾನ ಏರಿಕೆ ಕಾಣುವ ಮೂಲಕ 100 ನೇ ಸ್ಥಾನವನ್ನು ಭಾರತ ಪಡೆದುಕೊಂಡಿದೆ. ಗಳಿಸಲು ಭಾರತವು 30 ಕ್ಕಿಂತ ಹೆಚ್ಚು ಸ್ಥಾನಗಳನ್ನು ಗಳಿಸಿದೆ. ಇದರ ಸ್ಕೋರ್ ಕೂಡ 2 ರಲ್ಲಿ 56.05 ಕ್ಕೆ ಏರಿದೆ.

**ಸುಲಭ ವಹಿವಾಟು ಸೂಚ್ಯಂಕ (Ease of Doing Business):**

ಸುಲಭ ವಹಿವಾಟು ಸೂಚ್ಯಂಕದಲ್ಲಿ 10 ಮಾನದಂಡಗಳನ್ನು ಆಧರಿಸಿ ವಿಶ್ವದ 190 ರಾಷ್ಟ್ರಗಳ ಆರ್ಥಿಕತೆಯನ್ನು ಲೆಕ್ಕಹಾಕಿ ಪ್ರತಿವರ್ಷ ಸೂಚ್ಯಂಕವನ್ನು ವಿಶ್ವಬ್ಯಾಂಕ್ ಹೊರತರುತ್ತದೆ.

ಈ 10 ಮಾನದಂಡಗಳೆಂದರೆ ವ್ಯವಹಾರವನ್ನು ಪ್ರಾರಂಭಿಸುವುದು, ನಿರ್ಮಾಣ ಪರವಾನಗಿಯನ್ನು ನಿರ್ವಹಿಸುವುದು, ವಿದ್ಯುತ್ ಪಡೆಯುವುದು, ಆಸ್ತಿಯನ್ನು ನೋಂದಾಯಿಸುವುದು, ಸಾಲ ಪಡೆಯುವುದು, ಸಣ್ಣ ಹೂಡಿಕೆದಾರರ ಹಿತರಕ್ಷಣೆ ಕಾಯುವುದು, ತೆರಿಗೆ ಪಾವತಿಸುವುದು, ದಿವಾಳಿತನ ಪರಿಹಾರ ಮತ್ತು ಒಪ್ಪಂದಗಳನ್ನು ಜಾರಿಗೊಳಿಸುವುದು. ದಿವಾಳಿತನ ಪರಿಹಾರದಲ್ಲಿ ಭಾರತ 103ನೇ ಸ್ಥಾನವನ್ನು ಪಡೆದುಕೊಂಡಿದೆ. ತೆರಿಗೆ ಪಾವತಿ ವಿಭಾಗದಲ್ಲಿ 119ನೇ ಸ್ಥಾನ, ಸಾಲ ಪಡೆಯುವ ವಿಭಾಗದಲ್ಲಿ 29ನೇ ಸ್ಥಾನ, ಸಣ್ಣ ಹೂಡಿಕೆದಾರರನ್ನು ರಕ್ಷಿಸುವ ವಿಭಾಗದಲ್ಲಿ 4ನೇ ಸ್ಥಾನ ಮತ್ತು ನಿರ್ಮಾಣ ಪರವಾನಿಗೆಯಲ್ಲಿ 181ನೇ ಸ್ಥಾನವನ್ನು ಪಡೆದುಕೊಂಡಿದೆ.

**ಪ್ರಮುಖಾಂಶಗಳು**:

- ಈ ಬಾರಿ ಸೂಚ್ಯಂಕದಲ್ಲಿ ಗಣನೀಯ ಸಾಧನೆ ಮಾಡಿರುವ ಹತ್ತು ಟಾಪ್ ರಾಷ್ಟ್ರಗಳಾದ ಬ್ರೂನಿ, ದರುಸಲೇಂ, ಥೈಲ್ಯಾಂಡ್, ಮಲಾವಿ, ಕೊಸೊವೊ, ಉಜ್ಬೇಕಿಸ್ತಾನ್, ಜಾಂಬಿಯಾ, ನೈಜೀರಿಯಾ, ಜಿಬೌಟಿ ಮತ್ತು ಎಲ್ ಸಾಲ್ವಡಾರ್ ದೇಶಗಳಲ್ಲಿ ಪಟ್ಟಿಯಲ್ಲಿ ಭಾರತ ಸಹ ಸ್ಥಾನ ಪಡೆದುಕೊಂಡಿದೆ.
- ದಕ್ಷಿಣ ಏಷ್ಯಾ ಮತ್ತು ಬ್ರಿಕ್ಸ್ ರಾಷ್ಟ್ರಗಳ ಪೈಕಿ ಸುಲಭ ವಹಿವಾಟು ಸೂಚ್ಯಂಕದಲ್ಲಿ ಉತ್ತಮ ಸಾಧನೆ ಮಾಡಿರುವ ಏಕೈಕ ರಾಷ್ಟ್ರ ಭಾರತ.
- ದಕ್ಷಿಣ ಏಷ್ಯಾ ರಾಷ್ಟ್ರಗಳ ಪಟ್ಟಿಯಲ್ಲಿ ಅತ್ಯುತ್ತಮ ಸುಧಾರಣೆ ಕಂಡಿದ್ದರು ಭೂತಾನ್ (75) ಗಿಂತ ಕಡಿಮೆ ಶ್ರೇಯಾಂಕವನ್ನು ಭಾರತ ಪಡೆದುಕೊಂಡಿದೆ. ಉಳಿದಂತೆ ಭಾರತದ ನೆರೆಯ

www.karunaduexams.com

ರಾಷ್ಟ್ರಗಳಾದ ನೇಪಾಳ (105), ಶ್ರೀಲಂಕಾ (111), ಮಾಲ್ಡೀವ್ಸ್ (136), ಪಾಕಿಸ್ತಾನ (147), ಬಾಂಗ್ಲದೇಶ (177) ಮತ್ತು ಆಫ್ಘಾನಿಸ್ತಾನ (183) ಸ್ಥಾನವನ್ನು ಪಡೆದುಕೊಂಡಿವೆ.

**ವಿಶೇಷ ಬ್ಯಾಂಕಿಂಗ್ ವ್ಯವಸ್ಥೆ ಮೂಲಕ ರಸಗೊಬ್ಬರ ಸಬ್ಸಿಡಿ ಪಾವತಿಸಲು ಒಪ್ಪಿಗೆ**



2016–17ನೇ ಸಾಲಿನ ರಸಗೊಬ್ಬರ ಸಬ್ಸಿಡಿಯ ಬಾಕಿ ಮೊತ್ತ ₹ 10 ಸಾವಿರ ಕೋಟಿಯನ್ನು ಕಂಪೆನಿಗಳಿಗೆ ವಿಶೇಷ ಬ್ಯಾಂಕಿಂಗ್ ವ್ಯವಸ್ಥೆ ಮೂಲಕ ಪಾವತಿಸಲು ಕೇಂದ್ರ ಆರ್ಥಿಕ ವ್ಯವಹಾರ ಸಚಿವ ಸಂಪುಟ ಅನುಮತಿ ನೀಡಿದೆ.

**ಪ್ರಮುಖಾಂಶಗಳು**:

- ಗೊಬ್ಬರ ತಯಾರಕರಿಂದ ಮತ್ತು ಆಮದು ಮೂಲಕ ಸಬ್ಸಿಡಿ ದರದಲ್ಲಿ ಸರ್ಕಾರ 21 ಗ್ರೇಡ್ ಪಿ & ಕೆ ರಸಗೊಬ್ಬರಗಳನ್ನು ಮತ್ತು ಯೂರಿಯಾವನ್ನು ರೈತರಿಗೆ ಸರಬರಾಜು ಮಾಡುತ್ತಿದೆ. ರಸಗೊಬ್ಬರ ತಯಾರಿಕ ಸಂಸ್ಥೆಗಳಿಗೆ ಸಬ್ಸಿಡಿ ಮೊತ್ತವನ್ನು ಸಕಾಲದಲ್ಲಿ ಪಾವತಿಸಲು ಕೇಂದ್ರ ಹಣಕಾಸು ಸಚಿವಾಲಯ ರೂ 10 ಸಾವಿರ ಕೋಟಿಗೆ ವಿಶೇಷ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸ್ಥಾಪಿಸಲು ನಿರ್ಧರಿಸಿತ್ತು.
- ಅದರಂತೆ, ವಿಶೇಷ ಬ್ಯಾಂಕಿಂಗ್ ವ್ಯವಸ್ಥೆಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್ಬಿಐ) ಯೊಂದಿಗೆ ರಸಗೊಬ್ಬರ ಸಂಸ್ಥೆಗಳಿಗೆ ರೂ 10,000 ಕೋಟಿ ಸಬ್ಸಿಡಿ ಮೊತ್ತವನ್ನು ಪೂರೈಸಲಿದೆ.

**ಎಥನಾಲ್ ಮಿಶ್ರಿತ ಪೆಟ್ರೋಲ್ ಕಾರ್ಯಕ್ರಮದಡಿ ಎಥನಾಲ್ ಬೆಲೆ ಪರಿಷ್ಕರಣೆಗೆ ಸಂಪುಟ ಒಪ್ಪಿಗೆ**



ಎಥನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ) ಯೋಜನೆಯಡಿಯಲ್ಲಿ ಎಥೆನಾಲ್ ಅನ್ನು ಸಾರ್ವಜನಿಕ ವಲಯ ತೈಲ ಮಾರುಕಟ್ಟೆ ಸಂಸ್ಥೆಗಳಿಗೆ ಪೂರೈಸಲು ಎಥನಾಲ್ ಬೆಲೆ ಪರಿಷ್ಕರಣೆಗೆ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ (ಸಿಸಿಇಎ) ಅನುಮೋದನೆ ನೀಡಿದೆ. ಪರಿಷ್ಕೃತ ಬೆಲೆ ಪ್ರಕಾರ ಪ್ರತಿ ಲೀಟರ್ ಎಥೆನಾಲ್ ಗೆ ರೂ 40.85 ನಿಗದಿ ಪಡಿಸಲಾಗಿದೆ. ಜಿಎಸ್ಟಿ ಮತ್ತು ಸಾರಿಗೆ ವೆಚ್ಚ ಹೆಚ್ಚುವರಿಯಾಗಿ ಪಾವತಿಸಲಾಗುವುದು.

**ಹಿನ್ನಲೆ**:

ಎಥೆನಾಲ್ ಅನ್ನು ಸಮರ್ಪಕವಾಗಿ ಸರಬರಾಜು ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ 2014 ಡಿಸೆಂಬರ್ ನಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಕಾರ್ಯಕ್ರಮದಡಿ ಎಥೆನಾಲ್ ಬೆಲೆ ಪರಿಷ್ಕರಣೆ ಜಾರಿಗೆ ತಂದಿದೆ. ಅದರಂತೆ 2014-15 ಮತ್ತು 2015-16 ರ ಅವಧಿಯಲ್ಲಿ ತೆರಿಗೆ ಮತ್ತು ಸಾರಿಗೆ ವೆಚ್ಚ ಸೇರಿ ಎಥೆನಾಲ್ ಅನ್ನು ರೂ 48.50 ರಿಂದ ರೂ 49.50 ಬೆಲೆಯನ್ನು ಸರ್ಕಾರವು ನಿಗದಿಪಡಿಸಿದತ್ತು. ಇದರ ಪ್ರತಿಫಲವಾಗಿ 2013-14 ರಲ್ಲಿ 38 ಕೋಟಿ ಲೀಟರ್ ನಷ್ಟಿದ್ದ ಎಥೆನಾಲ್ ಸರಬರಾಜು 2015-16 ರಲ್ಲಿ 111 ಕೋಟಿ ಲೀಟರ್ ಏರಿಕೆ ಕಂಡಿತ್ತು.

**ಎಥೆನಾಲ್ ಮಿಶ್ರಣ:**

ಪೆಟ್ರೋಲ್ ನೊಂದಿಗೆ ಎಥೆನಾಲ್ ಅನ್ನು ಬೆರೆಸುವ ವಿಧಾನವನ್ನು ಎಥೆನಾಲ್ ಮಿಶ್ರಿತ ಪೆಟ್ರೋಲ್ ಎನ್ನಲಾಗುತ್ತದೆ. ಈ ಮಿಶ್ರಣವನ್ನು ಎಥೆನಾಲ್ ಇಂಧನ ಅಥವಾ ಗ್ಯಾಸೊಹಾಲ್ ಎನ್ನಲಾಗುವುದು. ಇದೊಂದು ಅರೆ ನವೀಕರಿಸಬಹುದಾದ ಇಂಧನ. ಎಥೆನಾಲ್ ಒಂದು ಜೈವಿಕ ಇಂಧನವಾಗಿದ್ದು ಕಬ್ಬಿನ ತ್ಯಾಜ್ಯ, ಜೋಳ ಮತ್ತು ಸೋರ್ಗಮ್ ಇತ್ಯಾದಿಗಳಿಂದ ತಯಾರಿಸಲಾಗುವುದು.

ಭಾರತದಲ್ಲಿ ಎಥೆನಾಲ್ ಮಿಶ್ರಣ ಕಾರ್ಯಕ್ರಮವನ್ನು 2001 ರಿಂದ ಪರಿಚಯಿಸಲಾಗಿದೆ. ವಾಹನ ಇಂಧನ ನೀತಿ 2003 ರಲ್ಲಿ ಮೊದಲ ಬಾರಿಗೆ ಎಥೆನಾಲ್ ಮಿಶ್ರಣವನ್ನು ಉಲ್ಲೇಖಿಸಲಾಗಿದೆ. ರಾಷ್ಟ್ರೀಯ ಜೈವಿಕ ಇಂಧನ ನೀತಿ-2009ರ ಅನ್ವಯ ಎಲ್ಲಾ ತೈಲ ಕಂಪನಿಗಳು ಶೇ 5% ಎಥೆನಾಲ್ ಅನ್ನು ಪೆಟ್ರೋಲ್ ನೊಂದಿಗೆ ಮಿಶ್ರಣ ಮಾಡುವುದು ಕಡ್ಡಾಯವಾಗಿದೆ.

**ಹೈದರಾಬಾದಿನಲ್ಲಿ 19ನೇ RPEC ವ್ಯಾಪಾರ ಸಮಾಲೋಚನಾ ಸಭೆ**



19ನೇ ಸುತ್ತಿನ ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವ (RPEC)ದ ವ್ಯಾಪಾರ ಸಮಾಲೋಚನಾ ಸಭೆ ಹಾಗೂ ಇತರೆ ಸಭೆಗಳು ತೆಲಂಗಣದ ಹೈದರಾಬಾದಿನಲ್ಲಿ ಜರುಗಿತು. ಇದರ ಜೊತೆಗೆ ಸರಕು, ಸೇವೆಗಳು ಮತ್ತು ಹೂಡಿಕೆಗೆ ಸಂಬಂಧಿಸಿದಂತೆ ಸಭೆಗಳನ್ನು ಆಯೋಜಿಸಲಾಗಿತ್ತು.

www.karunadueexams.com

# ರಾಷ್ಟ್ರೀಯ


**<u>ಭಾರತದ ನೌಕಪಡೆಗೆ 111 ಹೆಲಿಕಾಪ್ಟರ್ ಖರೀದಿಸಲು ಒಪ್ಪಿಗೆ</u>**



ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ರವರ ನೇತೃತ್ವದ ರಕ್ಷಣಾ ಸ್ವಾಧೀನಾ ಮಂಡಳಿ111 ಹೆಲಿಕಾಪ್ಟರ್ ಗಳನ್ನು ಭಾರತೀಯ ನೌಕಪಡೆಗೆ ಖರೀದಿಸಲು ಹಸಿರು ನಿಶಾನೆ ತೋರಿದೆ. ಭಾರತೀಯ ನೌಕಾಪಡೆಗೆ 21,738 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಹೆಲಿಕಾಪ್ಟರ್ ಗಳನ್ನು ಖರೀದಿಸಲಾಗುವುದು.

- 110 ಹೆಲಿಕಾಪ್ಟರ್ ಪೈಕಿ 95 ಕಾಪ್ಟರ್‌ಗಳನ್ನು ಮೇಕ್ ಇನ್ ಇಂಡಿಯಾ ಯೋಜನೆಯಡಿ ಭಾರತದಲ್ಲಿ ತಯಾರಿಸಲಾಗುವುದು. 16 ವಿಮಾನವನ್ನು ವಿದೇಶಿ ಕಾಪ್ಟರ್ ನಿರ್ಮಾಣದಲ್ಲಿ ಖರೀದಿಸಲಾಗುವುದು.
- ಸಿಕರ್ಸ್ಕಿ, ಬೆಲ್ ಮತ್ತು ಏರ್ಬಸ್ ಸೇರಿದಂತೆ ಪ್ರಮುಖ ಸಂಸ್ಥೆಗಳು ಈ ಯೋಜನೆಯಲ್ಲಿ ಭಾಗವಹಿಸಲಿವೆ ಎಂದು ನಿರೀಕ್ಷಿಸಲಾಗಿದೆ.
- ಭಾರತೀಯ ನೌಕಾಪಡೆಯಿಂದ ಹೊರಡಿಸಿಲಾದ ಮಾಹಿತಿ ಪ್ರಕಾರ ನವೀನ ಬಳಕೆ ಹೆಲಿಕಾಪ್ಟರ್ ಗಳು ಹುಡುಕಾಟ ಮತ್ತು ರಕ್ಷಣೆ, ಕಡಲ್ಗಳ್ಳತನ ವಿರೋಧಿ ಚಟುವಟಿಕೆ, ವಿಪತ್ತು ಪರಿಹಾರ ಮತ್ತು ಸಮೀಕ್ಷೆ ಸೇರಿದಂತೆ ವಿವಿಧ ಪಾತ್ರಗಳನ್ನು ನಿರ್ವಹಿಸಬಲ್ಲದಾಗಿರಲಿವೆ.

**<u>ವಿದ್ಯಾರ್ಥಿ ವಿಜ್ಞಾನ ಮಂಥನ: ರಾಷ್ಟ್ರವ್ಯಾಪಿ ವಿಜ್ಞಾನ ಪ್ರತಿಭೆ ಹುಡುಕಾಟ ಪರೀಕ್ಷೆ</u>**




ರಾಷ್ಟ್ರವ್ಯಾಪ್ತಿ ವಿಜ್ಞಾನ ಪ್ರತಿಭೆ ಹುಡುಕಾಟ ಪರೀಕ್ಷೆ ವಿದ್ಯಾರ್ಥಿ ವಿಜ್ಞಾನ ಮಂಥನ ನವೆಂಬರ್ 26 ರಂದು ನಡೆಯಲಿದೆ. ಇದು ಯುವಕರು, ವಿಶೇಷವಾಗಿ ಶಾಲಾ ವಿದ್ಯಾರ್ಥಿಗಳ ನಡುವೆ ವಿಜ್ಞಾನ, ತಂತ್ರಜ್ಞಾನ ಮತ್ತು ಗಣಿತಶಾಸ್ತ್ರದ ಕಲಿಕೆಗೆ ಉತ್ತೇಜನ ನೀಡಲು ಅನನ್ಯ ಪ್ರಯತ್ನವಾಗಿದೆ.

**ವಿದ್ಯಾರ್ಥಿ ವಿಜ್ಞಾನ ಮಂಥನ**:

- ಈ ಪರೀಕ್ಷೆಯನ್ನು ಖ್ಯಾತ ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು ವಿಗ್ಯಾನ ಪ್ರಸಾರ್ (ವಿಪಿ) ನೊಂದಿಗೆ ಆಯೋಜಿಸಿದ್ದಾರೆ. ವಿಗ್ಯಾನ ಪ್ರಸಾರ್ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು NCERT ಅಡಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಘಟನೆ.
- ಮುಂದಿನ ಪೀಳಿಗೆಯ ಉತ್ತಮ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಉತ್ತಮ ವೇದಿಕೆಯನ್ನು ಇದು ಕಲ್ಪಿಸಲಿದೆ. ಪರೀಕ್ಷೆಯನ್ನು ಆನ್ಲೈನ್ನಲ್ಲಿ ನಡೆಸಲಾಗುತ್ತದೆ. ವಿದ್ಯಾರ್ಥಿಗಳು ಲ್ಯಾಪ್ಟಾಪ್ ಅಥವಾ ಡೆಸ್ಕ್ಟಾಪ್, ಮೊಬೈಲ್, ಟ್ಯಾಬ್ಲೆಟ್ ಮುಂತಾದ ವಿವಿಧ ಡಿಜಿಟಲ್ ಕೇಂದ್ರಗಳಲ್ಲಿ 91,000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಯನ್ನು ಒಂದೇ ದಿನದಂದು ಹಾಜರಾಗಲಿದ್ದಾರೆ.

www.karunaduexams.com

**ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ತಿದ್ದುಪಡಿ) ಮಸೂದೆ, 2017 ಕೇಂದ್ರ ಸಚಿವ ಸಂಪುಟ್ಟ ಒಪ್ಪಿಗೆ**



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು 1993ರ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಸಮ್ಮತಿಸಿದೆ. ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳು, ಇತರೆ ಉನ್ನತ ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯ (ಎನ್‌ಸಿಟಿಇ) ಅನುಮತಿ ಪಡೆಯದೇ ನೀಡುತ್ತಿರುವ ಶಿಕ್ಷಕರ ಶಿಕ್‌ಷಣ ಕೋರ್ಸ್‌ಗಳಿಗೆ ಪೂರ್ವಾನ್ವಯವಾಗುವಂತೆ ಮಾನ್ಯತೆ ನೀಡುವುದು ಈ ಮಸೂದೆಯ ಉದ್ದೇಶವಾಗಿದೆ.

**ಪ್ರಮುಖಾಂಶಗಳು**:

- ಈ ಸಂಸ್ಥೆಗಳಲ್ಲಿ ಅಥವಾ ವಿವಿಗಳಲ್ಲಿ ಕಲಿಯುತ್ತಿರುವ ಅಥವಾ ಈಗಾಗಲೇ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಶಿಕ್ಷಕರಾಗಿ ನೌಕರಿ ಪಡೆಯಲು ಈ ತಿದ್ದುಪಡಿ ಅವಕಾಶ ನೀಡಲಿದೆ.
- ಈ ಸಂಸ್ಥೆಗಳಲ್ಲಿ ಕೋರ್ಸ್‌ಗಳಿಗೆ ನೋಂದಣಿ ಮಾಡಿದ ಹಾಗೂ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಒಂದು ಬಾರಿಯ ಕ್ರಮವಾಗಿ ಪೂರ್ವಾನ್ವಯವಾಗುವಂತೆ ಮಾನ್ಯತೆ ನೀಡಲಾಗುವುದು.
- ಇನ್ನು ಮುಂದೆ, B.Ed ಮತ್ತು D.El.Ed ನಂತಹ ಶಿಕ್ಷಕರ ಶಿಕ್ಷಣ ಕೋರ್ಸ್ಗಳನ್ನು ನಡೆಸುತ್ತಿರುವ ಎಲ್ಲಾ ಸಂಸ್ಥೆಗಳು NCTE ಯ ಸೆಕ್ಷನ್ 14ರ ಅಡಿಯಲ್ಲಿ NCTE ಯಿಂದ ಮನ್ನಣೆ ಪಡೆಯುವುದು ಕಡ್ಡಾಯ. ಇದಲ್ಲದೆ, ಅಂತಹ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ/ ವಿಶ್ವವಿದ್ಯಾನಿಲಯಗಳ ಕೋಸರ್ಗಳು NCTE ಕಾಯ್ದೆಯ 15 ನೇ ಸೆಕ್ಷನ್ ಅಡಿಯಲ್ಲಿ ಅನುಮತಿ ಪಡೆಯಬೇಕು.

**NCTE**:

NCTE ಕಾಯಿದೆ 1993 ಸಂಸತ್ತು ಮೂಲಕ ಜಾರಿಗೊಳಿಸಲಾಗಿದ್ದು, ಶಿಕ್ಷಕರ ಶಿಕ್ಷಣ ವ್ಯವಸ್ಥೆಯ ಯೋಜಿತ ಮತ್ತು ಸಮನ್ವಯವಾದ ಅಭಿವೃದ್ಧಿ, ನಿಯಂತ್ರಣ ಮತ್ತು ಸರಿಯಾದ ಗುಣಮಟ್ಟ ಖಚಿತಪಡಿಸಿಕೊಳ್ಳಲು ಜಾರಿಗೆ ತರಲಾಗಿದೆ. ಈ ಕಾಯಿದೆಯ ಅನ್ವಯ ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.

www.karunaduexams.com

**<u>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅವಧಿ ವಿಸ್ತರಣೆಗೆ ಸಂಪುಟ ಒಪ್ಪಿಗೆ</u>**



ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅವಧಿಯನ್ನು ಮೂರು ವರ್ಷಗಳ ಅವಧಿಗೆ ಅಂದರೆ 2017-18 ರಿಂದ 2018-19ರವರೆಗೆ ವಿಸ್ತರಿಸಲು ಕೇಂದ್ರ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ನಿರ್ಧರಿಸಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಇನ್ನು ಮುಂದೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ- ರೆಮ್ಯುನರೇಟಿವ್ ಅಪ್ರೋಚಸ್ ಫಾರ್ ಅಗ್ರಿಕಲ್ಚರ್ ಅಂಡ್ ಅಲೈಡ್ ಸೆಕ್ಟರ್ ರಿಜುವಿನೇಷನ್ 'ಆರ್‌ಕೆವಿವೈ–ಆರ್‌ಎಎಫ್‌ಟಿಎಎಆರ್ ಎಂದು ಮರು ನಾಮಕರಣ ಮಾಡಿ ಅನುಷ್ಠಾನಗೊಳಿಸಲಾಗುವುದು. ಪರಿಷ್ಕೃತ ಯೋಜನೆಯ ಅಡಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಕೊಯ್ಲಿನ ನಂತರದ ಮೂಲಸೌಕರ್ಯಗಳನ್ನು ಇನ್ನಷ್ಟು ಸುಧಾರಿಸುವುದು, ಕೃಷಿ ಸಂಬಂಧಿತ ಉದ್ಯಮವನ್ನು ಉತ್ತೇಜಿಸುವುದು ಪ್ರಮುಖ ಉದ್ದೇಶವಾಗಿದೆ.

**ಪ್ರಮುಖಾಂಶಗಳು**:

- ಮುಂದಿನ ಮೂರು ವರ್ಷಗಳ ಅವಧಿಗೆ (2019–20ರವರೆಗೆ) ಈ ಯೋಜನೆಗಾಗಿ ಬಜೆಟ್‌ನಲ್ಲಿ ₹15,722 ಕೋಟಿ ಮೀಸಲಿಡಲಾಗಿದೆ.
- ಈಶಾನ್ಯ ಮತ್ತು ಹಿಮಾಲಯ ರಾಜ್ಯಗಳನ್ನು ಬಿಟ್ಟು ಉಳಿದ ರಾಜ್ಯಗಳಿಗೆ ಈ ಯೋಜನೆಗೆ 60:40ರ ಅನುಪಾತದಲ್ಲಿ ಕೇಂದ್ರ ಸರ್ಕಾರ ಅನುದಾನ ಹಂಚಿಕೆ ಮಾಡಲಿದೆ. ಈಶಾನ್ಯ ಮತ್ತು ಹಿಮಾಲಯ ರಾಜ್ಯಗಳಿಗೆ ಈ ಪ್ರಮಾಣ 90:10ರ ಅನುಪಾತದಲ್ಲಿರಲಿದೆ.
- ಯೋಜನೆಗೆ ವಾರ್ಷಿಕವಾಗಿ ನೀಡುವ ಅನುದಾನದ ಶೇ 50ರಷ್ಟು ಅನುದಾನವನ್ನು ಮೂಲಸೌಕರ್ಯ ಕಲ್ಪಿಸಲು ಮತ್ತು ಆಸ್ತಿ ಸೃಜಿಸಲು ಹಾಗೂ ಶೇ 30ರಷ್ಟು ಅನುದಾನವನ್ನು ಮೌಲ್ಯವರ್ಧಿತ ಉತ್ಪನ್ನಗಳ ಸಂಬಂಧಿಸಿದ ಯೋಜನೆಗಳಿಗೆ ಮೀಸಲಾಡಗುವುದು.
- ಯೋಜನೆಗೆ ವಾರ್ಷಿಕವಾಗಿ ನೀಡುವ ಅನುದಾನದ ಶೇ20ರಷ್ಟು ಮೊತ್ತವನ್ನು (ಹೆಚ್ಚುವರಿಯಾಗಿ) ಇದರ ಅಡಿಯಲ್ಲಿ ಬರುವ ರಾಷ್ಟ್ರೀಯ ಆದ್ಯತೆಗಳ ಉಪ ಯೋಜನೆಗಳಿಗಾಗಿ ಕೇಂದ್ರ ಒದಗಿಸಲಿದೆ.
- ಶೇ10ರಷ್ಟು ಮೊತ್ತವನ್ನು ಕೃಷಿ ಆಧರಿತ ಉದ್ಯಮದ ಅಭಿವೃದ್ಧಿಗೆ, ಕೌಶಲ ಅಭಿವೃದ್ಧಿ, ಕೃಷಿ ಉದ್ಯಮ ಸ್ಥಾಪಿಸುವವರಿಗೆ ಹಣಕಾಸಿನ ನೆರವು ನೀಡುವುದಕ್ಕೆ ಬಳಸಲಿದೆ.

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:**

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು 2008-09ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಕೃಷಿ ವಲಯವನ್ನು ಬಲಪಡಿಸಿ ವಾರ್ಷಿಕ ಶೇ 4% ಬೆಳವಣಿಗೆ ಸಾಧಿಸುವುದು ಯೋಜನೆಯ ಪ್ರಮುಖ ಉದ್ದೇಶ. ಯೋಜನೆಯು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಿಂದ ಜಾರಿಯಲ್ಲಿದೆ. ಕೃಷಿಯಲ್ಲಿ ಹೂಡಿಕೆಯನ್ನು ಪ್ರೋತ್ಸಾಹಿಸುವ ಯೋಜನೆಗಳು ಮತ್ತು ಯೋಜನೆಗಳಲ್ಲಿ ಪಾಲ್ಗೊಳ್ಳುವಲ್ಲಿ ರಾಜ್ಯಗಳಿಗೆ ಗಣನೀಯ ನಮ್ಯತೆ ಮತ್ತು ಸ್ವಾಯತ್ತತೆಯನ್ನು ಇದು ಒದಗಿಸಿದೆ.

www.karunaduexams.com

## <u>ಹಿಂದೂ ಮಹಾಸಾಗರ ತೀರದ ರಾಷ್ಟ್ರಗಳೊಂದಿಗೆ ನೈಜ ಸಮಯದ ಕಡಲ ಮಾಹಿತಿ ಹಂಚಿಕೊಳ್ಳಲು ಭಾರತ ಸಿದ್ಧ</u>



10 ಹಿಂದೂ ಮಹಾಸಾಗರ ಸಮುದ್ರ ತೀರದ 10 ರಾಷ್ಟ್ರಗಳೊಂದಿಗೆ ನೈಜ ಸಮಯದಲ್ಲಿ ಹಿಂದೂ ಮಹಾಸಾಗರದಲ್ಲಿ ಗುಪ್ತಚರ ಮಾಹಿತಿಯನ್ನು ಹಂಚಿಕೊಳ್ಳಲು ಭಾರತ ಸಿದ್ಧವಿದೆ ಎಂದು ಭಾರತೀಯ ನೌಕಪಡೆಯ ಮುಖ್ಯಸ್ಥ ಸುನೀಲ್ ಲಂಬಾರವರು ಗೋವಾ ಮೆರಿಟೈಮ್ ಸಮಾವೇಶದಲ್ಲಿ ಹೇಳಿದ್ದಾರೆ. ಹಿಂದೂ ಮಹಾಸಾಗರದಲ್ಲಿ ಚೀನಾ ತನ್ನ ಅಸ್ತಿತ್ವವನ್ನು ಹೆಚ್ಚಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಭಾರತದ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಒಂದು ಪ್ರಸ್ತಾಪವನ್ನು ಮಾಡಿದೆ.

**ಪ್ರಮುಖಾಂಶಗಳು**:

- ವಾಣಿಜ್ಯ ಸಂಚಾರ ಮತ್ತು ಗುಪ್ತಚರ ಚಲನೆಯ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲಾಗುವುದು. ಮಾಹಿತಿ ಹಂಚಿಕೆಯು ಸಾಂಪ್ರದಾಯಿಕ ಮಿಲಿಟರಿ ಉದ್ದೇಶಗಳಿಗಾಗಿ ಅಲ್ಲದಿದ್ದರು ಸಮುದ್ರದಲ್ಲಿ ಸಂಭವಿಸಬಹುದಾದ ತೊಂದರೆಗಳನ್ನು ನಿವಾರಿಸಲು ಸಹಕಾರಿಯಾಗಲಿದೆ. ಈ
- ಭಾರತ ಈಗಾಗಲೇ ಈ ವಲಯದಲ್ಲಿನ ಹಲವಾರು ರಾಷ್ಟ್ರಗಳೊಂದಿಗೆ ಈ ಸಹಕಾರ ಒಪ್ಪಂದವನ್ನು ಹೊಂದಿದ್ದು, ಬೇರೆ ರಾಷ್ಟ್ರಗಳೊಂದಿಗೆ ವಿಸ್ತರಿಸುವ ಸಲುವಾಗಿ ಮುಂದಾಗಿದೆ.

## <u>ಉತ್ತರ ಪ್ರದೇಶದಲ್ಲಿ ಭಾರತದ ಮೊದಲ ಬ್ಲಾಕ್ ಬಕ್ (Blackbuck) ಸಂರಕ್ಷಣಾ ವಲಯ</u>



ಭಾರತದ ಮೊದಲ ಬ್ಲಾಕ್ ಬಕ್ ಸಂರಕ್ಷಣಾ ವಲಯ ಉತ್ತರ ಪ್ರದೇಶದ ಅಲಹಬಾದ್ ಬಳಿ ಸ್ಥಾಪನೆಯಾಗಲಿದೆ. ಈ ಸಂಬಂಧ ಉತ್ತರ ಪ್ರದೇಶ ಸರ್ಕಾರದ ಸಚಿವ ಸಂಪುಟ ಅನುಮೋದನೆ ನೀಡಿದೆ. ಬ್ಲಾಕ್ ಬಕ್ ಗಳ ಸಂರಕ್ಷಣೆಗಾಗಿ ಪ್ರತ್ಯೇಕವಾಗಿ ಮೀಸಲಿಡಲಾದ ಸಂರಕ್ಷಣಾ ವಲಯ ಇದಾಗಲಿದೆ. ವನ್ಯಜೀವಿ ಸಂರಕ್ಷಣಾ ಕಾಯಿದೆ, 1972ರ ಸೆಕ್ಷನ್ 36 ಎ (1) ಮತ್ತು (2) ರಡಿ ಸಂರಕ್ಷಣಾ ವಲಯವನ್ನು ರಾಜ್ಯ ಸರ್ಕಾರ ಘೋಷಿಸಿದೆ.

**ಪ್ರಮುಖಾಂಶಗಳು**:

- ಕಲ್ಲು ಮತ್ತು ಶುಷ್ಕ ಭೂಪ್ರದೇಶಗಳಿಗೆ ಹೆಸರುವಾಸಿಯಾಗಿರುವ ಮೆಜ ಅರಣ್ಯ ವಿಭಾಗದ 126 ಹೆಕ್ಟೇರ್ ಪ್ರದೇಶದಲ್ಲಿ ಈ ಸಂರಕ್ಷಣಾ ವಲಯನ್ನು ಸ್ಥಾಪಿಸಲಾಗುವುದು. ಸುಮಾರು 350 ಬ್ಲಾಕ್ ಬಕ್ ಗಳು ಈ ಪ್ರದೇಶದಲ್ಲಿ ಇರುವುದಾಗಿ ಅಂದಾಜಿಸಲಾಗಿದೆ.
- ಇದರಿಂದ ಬ್ಲಾಕ್ ಬಕ್ಗಳನ್ನು ಪರಿಣಾಮಕಾರಿಯಾಗಿ ಸಂರಕ್ಷಿಸಲು ಸಹಾಯವಾಗಲಿದೆ. ಇದರ ಜೊತೆಗೆ ಜೀವವೈವಿಧ್ಯತೆ ಸಂರಕ್ಷಣೆ ಹಾಗೂ ಅದಕ್ಕಾಗಿ ಜನರ ಪಾಲ್ಗೊಳ್ಳಲು ಅವಕಾಶ ದೊರೆಯಲಿದೆ.
- ಜೊತೆಗೆ ಪರಿಸರ-ಪ್ರವಾಸೋದ್ಯಮವನ್ನು ಉತ್ತೇಜಿಸುವದರೊಂದಿಗೆ ಸ್ಥಳೀಯರಿಗೆ ಉದ್ಯೋಗದ ಅವಕಾಶಗಳು ದೊರೆಯಲಿವೆ.

www.karunaduexams.com


**ಬ್ಲಾಕ್ ಬಕ್**:

ಇಂಡಿಯನ್ ಬ್ಲ್ಯಾಕ್ಬಕ್ (ಆಂಟಿಲೋಪ್ ಸೆರ್ವಿಕಾಪ್ರಾ) ಎಂಬುದು ಒಂದು ಜಿಂಕೆಯಾಗಿದ್ದು, ಅಂಟಿಲೋಪ್ ಕುಲದ ಬದುಕುಳಿದಿರುವ ಏಕೈಕ ಜೀವಿ. ಚಿರತೆಯ ನಂತರ ವೇಗವಾಗಿ ಓಡುವ ಎರಡನೇ ಪ್ರಾಣಿ ಇದಾಗಿದೆ. ಹುಲ್ಲುಗಾವಲು ಪ್ರದೇಶಗಳು ಮತ್ತು ಸ್ವಲ್ಪ ಅರಣ್ಯ ಪ್ರದೇಶಗಳಲ್ಲಿ ಬ್ಲ್ಯಾಕ್ಬಕ್ ಹೆಚ್ಚಾಗಿ ಕಾಣಬಹುದು. ನೀರು ಹೆಚ್ಚಾಗಿ ಬೇಕಾಗಿರುವುದರಿಂದ ದೀರ್ಘಕಾಲದವರೆಗೆ ನೀರು ಲಭ್ಯವಿರುವ ಪ್ರದೇಶಗಳಲ್ಲಿ ಹೆಚ್ಚು ಆದ್ಯತೆಯನ್ನು ನೀಡುತ್ತವೆ. ಇವುಗಳು ಕೇಂದ್ರ ಪಶ್ಚಿಮ ಭಾರತ (ರಾಜಸ್ಥಾನ, ಗುಜರಾತ್, ಪಂಜಾಬ್, ಹರಿಯಾಣ, ಮಹಾರಾಷ್ಟ್ರ ಮತ್ತು ಒಡಿಶಾ) ಮತ್ತು ದಕ್ಷಿಣ ಭಾರತ (ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ)ದಲ್ಲಿ ಕಂಡುಬರುತ್ತವೆ.

ವನ್ಯಜೀವಿ ಕಾಯಿದೆ-1972ರ ಭಾಗ 1 ರಲ್ಲಿ ಬ್ಲಾಕ್ ಬಕ್ ಭೇಟೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ರಾಜಸ್ತಾನದ ಬಿಷ್ನೋಯ್ ಸಮುದಾಯ ಬ್ಲಾಕ್ ಬಕ್ ಮತ್ತು ಚಿಂಕಾರಗಳ ಸಂರಕ್ಷಣೆಗೆ ವಿಶ್ವಮನ್ನಣೆ ಗಳಿಸಿದೆ.

**<u>ನವದೆಹಲಿಯಲ್ಲಿ ವರ್ಲ್ಡ್ ಫುಡ್ ಇಂಡಿಯಾ: 2017 ಪ್ರಾರಂಭ</u>**



ನವದೆಹಲಿಯ ಇಂಡಿಯಾ ಗೇಟ್ ಲಾನ್ ನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿರವರು ನವೆಂಬರ್ 3, 2017 ರಂದು ವಿಶ್ವ ಆಹಾರ ಭಾರತ 2017 (ವರ್ಲ್ಡ್ ಫುಡ್ ಇಂಡಿಯಾ) ಉದ್ಘಾಟಿಸಿದರು. ಮೂರು ದಿನಗಳ ವಿಶ್ವ ಆಹಾರ ಭಾರತವನ್ನು ಆಹಾರ ಸಂಸ್ಕರಣ ಕೈಗಾರಿಕೆ ಸಚಿವಾಲಯ ಆಯೋಜಿಸಿದೆ. 2017 ವಿಶ್ವ ಆಹಾರ ಭಾರತದ ಧ್ಯೇಯವಾಕ್ಯ "ಟ್ರಾನ್ಸ್ಫರ್ಮಿಂಗ್ ದಿ ಫುಡ್ ಎಕಾನಮಿ" ಆಗಿದೆ. ಜರ್ಮನಿ, ಜಪಾನ್ ಮತ್ತು ಡೆನ್ಮಾರ್ಕ್ ವಿಶ್ವ ಆಹಾರ ಭಾರತಕ್ಕೆ ಪಾಲುದಾರ ರಾಷ್ಟ್ರಗಳಾಗಿವೆ.

**ವಿಶ್ವ ಆಹಾರ ಭಾರತ 2017:**

ವಿಶ್ವ ಆಹಾರ ಭಾರತದ ಉದ್ದೇಶವು ಆಹಾರದ ಆರ್ಥಿಕತೆಯನ್ನು ಪರಿವರ್ತಿಸುವುದು ಮತ್ತು ಭಾರತವನ್ನು ಹೂಡಿಕೆಯ ಆದ್ಯತೆಯ ರಾಷ್ಟ್ರವನ್ನಾಗಿ ಸ್ಥಾಪಿಸುವ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸುವುದು ಮತ್ತು ಭಾರತವನ್ನು ಜಾಗತಿಕ ಆಹಾರ ಸಂಸ್ಕರಣ ಕೈಗಾರಿಕ ಪ್ರಮುಖ ತಾಣವನ್ನಾಗಿಸುವುದು ಆಗಿದೆ.

- ಪ್ರಪ್ರಥಮ ಬಾರಿಗೆ ಭಾರತ ಆಹಾರ ಸಂಸ್ಕರಣೆಗೆ ಸಂಬಂಧಿಸಿದ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.
- ಜಾಗತಿಕ ಹೂಡಿಕೆದಾರರು, ಕಂಪನಿಗಳು, ಬ್ಯುನಿನೆಸ್ ಪ್ರತಿನಿಧಿಗಳು ಮತ್ತು ದೇಶಿಯ ಆಹಾರ ಸಂಸ್ಕರಣ ಸಂಸ್ಥೆಗಳು ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸೇರುತ್ತಿರುವುದು ಇದೆ ಮೊದಲು.
- ದೇಶಿಯ ಸಂಸ್ಥೆಗಳು ಹಾಗೂ 22ಕ್ಕೂ ಹೆಚ್ಚು ವಿದೇಶಿ ಆಹಾರ ಸಂಸ್ಕರಣ ಸಂಸ್ಥೆಗಳು ಭಾಗವಹಿಸಲಿವೆ. ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ 10 ಬಿಲಿಯನ್ ಹೂಡಿಕೆಯನ್ನು

www.karunaduexams.com

ನಿರೀಕ್ಷಿಸಲಾಗಿದ್ದು, ಮುಂದಿನ ಮೂರು ವರ್ಷಗಳಲ್ಲಿ 1 ಮಿಲಿಯನ್ ಉದ್ಯೋಗ ಸೃಷ್ಟಿಸಲು ಇದು ವೇದಿಕೆಯಾಗಲಿದೆ.

## ಡಿಸೆಂಬರ್ 1, 2017 ರಿಂದ ನಾಲ್ಕು ಚಕ್ರ ವಾಹನಗಳಿಗೆ ಫಾಸ್ಟ್ಯಾಗ್ ಕಡ್ಡಾಯ



ಎಲ್ಲಾ ನಾಲ್ಕು ಚಕ್ರ ವಾಹನಗಳಿಗೆ ಡಿಸೆಂಬರ್ 1, 2017 ರಿಂದ ಫಾಸ್ಟ್ಯಾಗ ಕಡ್ಡಾಯಗೊಳಿಸಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಆದೇಶ ಹೊರಡಿಸಿದೆ. ಕೇಂದ್ರ ಮೋಟಾರು ವಾಹನ (CMV) ನಿಯಮಗಳಿಗೆ ಕೇಂದ್ರ ಸರ್ಕಾರ ತಂದ ತಿದ್ದುಪಡಿಯ ಅನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**ಪ್ರಮುಖಾಂಶಗಳು**:

- ಅಧಿಸೂಚನೆಯ ಪ್ರಕಾರ ಫಾಸ್ಟಾಗ್ ಎನ್ನುವುದು ಆನ್ಬೋರ್ಡ್ ಘಟಕ (ಟ್ರಾನ್ಸ್ಪಾಂಡರ್) ಅಥವಾ ವಾಹನದ ಮುಂಭಾಗದ ಗಾಜು ಪರದೆಯ ಮೇಲೆ ಅಳವಡಿಸಲಾಗಿರುವ ಅಂತಹ ಯಾವುದೇ ಸಾಧನ. ವಾಹನಗಳ ಮುಂಭಾಗದ ಗಾಜಿಗೆ (ವಿಂಡ್‌ಸ್ಕ್ರೀನ್) ಫಾಸ್ಟ್ಯಾಗ್ ಸಾಧನವನ್ನು ವಾಹನ ತಯಾರಿಕಾ ಕಂಪೆನಿಗಳು ಅಥವಾ ಡೀಲರ್‌ಗಳು ಅಳವಡಿಸಬೇಕು.
- ಮುಂಭಾಗದ ಗಾಜು ಇಲ್ಲದ ವಾಹನಗಳನ್ನು ಮಾರಾಟ ಮಾಡಿದ ಸಂದರ್ಭದಲ್ಲಿ, ವಾಹನವನ್ನು ನೋಂದಣಿ ಮಾಡುವುದಕ್ಕೂ ಮುನ್ನ ಅದರ ಮಾಲೀಕ ಫಾಸ್ಟ್ಯಾಗ್ ಸಾಧನವನ್ನು ಅಳವಡಿಸಿಕೊಳ್ಳಬೇಕು' ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.
- ಟ್ಯಾಗ್ ವಿತರಕರಿಂದ ಟ್ಯಾಗ್ ಅನ್ನು ಖರೀದಿಸದ ನಂತರ ಅದನ್ನು ಪ್ರಿಪೇಯ್ಡ್ ಖಾತೆಗೆ ಲಿಂಕ್ ಮಾಡಿಸಬೇಕು. ನಂತರ ವಾಹನ ಮಾಲೀಕರು ಅಗತ್ಯಕತೆಗೆ ತಕ್ಕಂತೆ ರೀಜಾರ್ಜ್ ಮಾಡಿಸಿಕೊಳ್ಳಬೇಕು.

**ಫಾಸ್ಟ್ಯಾಗ್ (FASTag):**

ರೇಡಿಯೊ ಫ್ರೀಕ್ವೆನ್ಸಿ ಐಡೆಂಫಿಕೇಷನ್ (ಆರ್‌ಎಫ್‌ಐಡಿ) ತಂತ್ರಜ್ಞಾನವನ್ನು ಒಳಗೊಂಡಿರುವ ಫಾಸ್ಟ್ಯಾಗ್ ಸಾಧನವು ಹೆದ್ದಾರಿಗಳಲ್ಲಿ ಎಲೆಕ್ಟ್ರಾನಿಕ್ ವಿಧಾನದಲ್ಲಿ ಟೋಲ್ ಪಾವತಿಸುತ್ತದೆ. ಈ ಸಾಧನದೊಂದಿಗೆ ಜೋಡಣೆ ಮಾಡಿರುವ ಖಾತೆಗೆ ಮೊದಲೇ ರೀಚಾರ್ಜ್ ಮಾಡಲಾಗಿರುತ್ತದೆ. ವಾಹನ ಮಾಲೀಕ ತನ್ನ ಅಗತ್ಯಕ್ಕೆ ತಕ್ಕಂತೆ ಇದಕ್ಕೆ ರೀಚಾರ್ಜ್ ಮಾಡಬಹುದು. ವಾಹನವು ಟೋಲ್ ಸಂಗ್ರಹ ಕೇಂದ್ರದಲ್ಲಿ ಹಾದುಹೋದಾಗ, ಟೋಲ್ ಮೊತ್ತವು ಆರ್‌ಎಫ್‌ಐಡಿ ಕಾರ್ಡ್‌ನಿಂದ ಕಡಿತವಾಗುತ್ತದೆ. ಈ ವ್ಯವಸ್ಥೆಯಲ್ಲಿ ವಾಹನಗಳು ಟೋಲ್ ಕೇಂದ್ರದಲ್ಲಿ ನಿಲ್ಲುವ ಅಗತ್ಯವೇ ಇರುವುದಿಲ್ಲ. ಸದ್ಯ, ದೇಶದಾದ್ಯಂತ ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ 370 ಟೋಲ್ ಕೇಂದ್ರಗಳಲ್ಲಿ 'ಫಾಸ್ಟ್ಯಾಗ್' ಕಾರ್ಯನಿರ್ವಹಿಸುತ್ತಿವೆ.

www.karunadu exams.com

## ಆಂಧ್ರಪ್ರದೇಶದ ಎಟಿಕೊಪ್ಪಕಾ ಗೊಂಬೆಗಳಿಗೆ  ಭೌಗೋಳಿಕ ಗುರುತು (ಜಿಐ) ಟ್ಯಾಗ್



ಭೌಗೋಳಿಕ ಗುರುತು ನೋಂದಣಿ ಸಂಸ್ಥೆಯು (GIR) ಆಂಧ್ರ ಪ್ರದೇಶದ ಸಾಂಪ್ರದಾಯಿಕ ಎಟಿಕೊಪ್ಪಕ ಗೊಂಬೆಗಳಿಗೆ ಭೌಗೋಳಿಕ ಗುರುತು (GI) ಟ್ಯಾಗ್ ನೀಡಿದೆ. ಈ ಸಾಂಪ್ರದಾಯಿಕ ಆಟಿಕೆಗಳನ್ನು ಆಂಧ್ರ ಪ್ರದೇಶ ರಾಜ್ಯದ ವಿಶಾಖಪಟ್ಟಣಂ ಜಿಲ್ಲೆಯ ವರಾಹ ನದಿಯ ದಡದಲ್ಲಿರುವ ಎಟಿಕೊಪ್ಪಕಾ ಹಳ್ಳಿಯಲ್ಲಿನ ಕುಶಲಕರ್ಮಿಗಳು ಮಾಡುತ್ತಾರೆ.

ಜಿಐ ಹೆಗ್ಗುರುತು ಪಡೆಯುವ ಮೂಲಕ ಕೋಂಡಪಲ್ಲಿ ಆಟಿಕೆಗಳು, ತಿರುಪತಿ ಲಡ್ಡು, ಬೊಬ್ಬಿಲಿ ವೀಣ, ಶ್ರೀಕಾಲಹಸ್ತಿ ಕಲಂಕರಿ, ಉಪ್ಪದ ಜಮ್ದನಿ ಸೀರೆಗಳ ಪಟ್ಟಿಗೆ ಎಟಿಕೊಪ್ಪಕಾ ಬೊಂಬೆಗಳು ಸೇರ್ಪಡೆಗೊಂಡತಾಗಿದೆ.

**ಎಟಿಕೊಪ್ಪಕಾ ಗೊಂಬೆಗಳು:**

ಎಟಿಕೊಪ್ಪಕಾ ಗೊಂಬೆ ತಯಾರಿಸುವ ಕಲೆ ಸುಮಾರು 400 ವರ್ಷಗಳಷ್ಟು ಹಳೆಯದು. ತಲೆ ತಲಾಂತರವಾಗಿ ಈ ಕಲೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಈ ಬೊಂಬೆಗಳನ್ನು ಮರದಲ್ಲಿ ತಯಾರಿಸಿ, ನೈಸರ್ಗಿಕ ಬಣ್ಣವನ್ನು ಹಚ್ಚಲಾಗುತ್ತದೆ. "ಅಂಕುಡಿ ಕರ (Ankuddi Karra)" ಮರವನ್ನು ಇವುಗಳ ತಯಾರಿಕೆಗೆ ಬಳಸಲಾಗುತ್ತದೆ.

## ಅಂಚೆಚೀಟಿ ಸಂಗ್ರಹಣೆ ಹವ್ಯಾಸ ಪ್ರೋತ್ಸಾಹಿಸಲು ದೀನ್ ದಯಾಳ್ ಸ್ಪರ್ಶ್ ಯೋಜನೆ




ಅಂಚೆ ಚೀಟಿ ಸಂಗ್ರಹ ಮಾಡುವ ಹವ್ಯಾಸವುಳ್ಳ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರ ಸ್ಕಾಲರ್‌ಶಿಪ್ ನೀಡಲು ಮುಂದಾಗಿದೆ. ಅಂಚೆ ಚೀಟಿಗಳನ್ನು ಸಂಗ್ರಹಿಸುವುದು, ಅವುಗಳನ್ನು ಅಧ್ಯಯನ, ಸಂಶೋಧನೆ ಮಾಡುವ ಮಕ್ಕಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ 'ದೀನ್ ದಯಾಳ್ ಸ್ಪರ್ಶ್ ಯೋಜನೆ'ಯನ್ನು ಕೇಂದ್ರ ದೂರಸಂಪರ್ಕ ಸಚಿವಾಲಯ ಪ್ರಾರಂಭಿಸಿದೆ. ಮಕ್ಕಳಲ್ಲಿ ಅಂಚೆ ಚೀಟಿ ಸಂಗ್ರಹ ಹವ್ಯಾಸಕ್ಕೆ ಉತ್ತೇಜನ ನೀಡುವ ಸಲುವಾಗಿ ಈ ಯೋಜನೆ ತರಲಾಗಿದೆ. ಸ್ಪರ್ಶ್ (SPARSH) ಎಂದರೆ Scholarship for Promotion of Aptitude & Research in Stamps as a Hobby ಎಂದರ್ಥ.

**ಪ್ರಮುಖಾಂಶಗಳು**:

- ಈ ಯೋಜನೆಯಡಿ, ಉತ್ತಮ ಶೈಕ್ಷಣಿಕ ದಾಖಲೆಯನ್ನು ಹೊಂದಿರುವ ಹಾಗೂ ಅಂಚೆ ಚೀಟಿ ಸಂಗ್ರಹಣೆ ಹವ್ಯಾಸ ಹೊಂದಿರುವ ಆರನೇ ತರಗತಿಯಿಂದ ಒಂಬತ್ತನೆ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿವೇತನವನ್ನು ನೀಡಲಾಗುವುದು.  ಅಂಚೆಚೀಟಿಗಳನ್ನು ಸಂಗ್ರಹಿಸುವ

ಹವ್ಯಾಸವನ್ನು ರೂಢಿಸಿಕೊಂಡಿರುವ ವಿದ್ಯಾರ್ಥಿಗಳಿಗೆ 920 ವಿದ್ಯಾರ್ಥಿವೇತನಗಳನ್ನು ಸರ್ಕಾರವು ನೀಡಲಿದೆ.

- ಪ್ರತಿ ಪೋಸ್ಟಲ್ ಸರ್ಕಲ್ ಗೆ ಗರಿಷ್ಠ 40 ಸ್ಕಾಲರ್ ಶಿಪ್ ಗಳನ್ನು ನೀಡಲಾಗುವುದು. ಆರರಿಂದ ಒಂಬತ್ತನೆ ತರಗತಿಯಿಂದ ಪ್ರತಿ ತರಗತಿಯಿಂದ 10 ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪ್ರಕ್ರಿಯೆ ಮೂಲಕ ಆಯ್ಕೆ ಮಾಡಲಾಗುವುದು.
- ಸ್ಕಾಲರ್ ಶಿಪ್ ಮೊತ್ತವು ಪ್ರತಿ ವರ್ಷಕ್ಕೆ ರೂ 6000/ ಅಂದರೆ ತಿಂಗಳಿಗೆ ರೂ 500.

## <u>ಆಹಾರ ನಿಯಂತ್ರಣ ಪೋರ್ಟಲ್ ಮತ್ತು ನಿವೇಶ್ ಬಂಧು ಪೋರ್ಟಲ್ ಗೆ ಸರ್ಕಾರದಿಂದ ಚಾಲನೆ</u>




ಕೇಂದ್ರ ಸರ್ಕಾರ ಆಹಾರ ನಿಯಂತ್ರಣ ಪೋರ್ಟಲ್ ಮತ್ತು ಹೂಡಿಕೆದಾರರ ಸೌಲಭ್ಯ ಪೋರ್ಟಲ್ ಅನ್ನು ಪ್ರಾರಂಭಿಸಿದೆ. ವರ್ಲ್ಡ್ ಫುಡ್ ಇಂಡಿಯಾ 2017 ಪ್ರದರ್ಶನ ಸಮಾರಂಭದಲ್ಲಿ ಈ ಪೋರ್ಟಲ್ ಗಳಿಗೆ ಚಾಲನೆ ನೀಡಲಾಗಿದೆ.

ಆಹಾರ ಸಂಸ್ಕರಣ ಮತ್ತು ಕೈಗಾರಿಕೆಗಳ ಸಚಿವಾಲಯ (MoFPI) ಮತ್ತು ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಪ್ರಾಧಿಕಾರ (FSSAI) ಜಂಟಿಯಾಗಿ ಈ ಪೋರ್ಟಲ್ ಗಳನ್ನು ಪ್ರಾರಂಭಿಸಿವೆ. ಆಹಾರ ವ್ಯವಹಾರ ಕ್ಷೇತ್ರದಲ್ಲಿ ದೇಶೀಯ ಬೇಡಿಕೆಗಳು ಮತ್ತು ಆಹಾರ ಆಮದುಗಳನ್ನು ಪೂರೈಸಲು ಆಹಾರ ಇದು ಏಕೈಕ ಸಂಪರ್ಕ ಸಾಧನವಾಗಲಿದೆ.

ಆಹಾರದ ಗುಣಮಟ್ಟ, ಸ್ಥಿರ ಜಾರಿ, ದೋಷ ಮುಕ್ತ ಆಹಾರ ಆಮದು, ವಿಶ್ವಾಸಾರ್ಹ ಆಹಾರ ಪರೀಕ್ಷೆ ಮತ್ತು ಸುರಕ್ಷಿತ ಆಹಾರ ಸಂಸ್ಕರಣ ಸಂಹಿತೆ ವಿಧಾನಗಳ ಬಗ್ಗೆ ಪೋರ್ಟಲ್ ನ ಪ್ರಮುಖ ಗುರಿಯಾಗಿದೆ.

**ನಿವೇಶ್ ಬಂಧು ಪೋರ್ಟಲ್:**

ವಿಶೇಷ ಪೋರ್ಟಲ್-ನಿವೇಶ್ ಬಂಧು-ಅಥವಾ 'ಹೂಡಿಕೆದಾರರ ಸ್ನೇಹಿತ" (ಇನ್ವೆಸ್ಟರ್ ಫ್ರೆಂಡ್ ) \ ಕೇಂದ್ರ ಮತ್ತು ರಾಜ್ಯ ಸರಕಾರದ ನೀತಿಗಳು, ಆಹಾರ ಸಂಸ್ಕರಣಾ ಕ್ಷೇತ್ರಕ್ಕೆ ಲಭ್ಯ ಇರುವ ಪ್ರೋತ್ಸಾಹಧನ ಇತ್ಯಾದಿ ಮಾಹಿತಿಗಳನ್ನು ಕ್ರೋಢಿಕರಿಸಿ ಒದಗಿಸುತ್ತದೆ. ಅದು ಸ್ಥಳೀಯ ಮಟ್ಟದವರೆಗೆ ಸಂಪನ್ಮೂಲಗಳ ಪಟ್ಟಿಯನ್ನು ಸಂಸ್ಕರಣಾ ಆವಶ್ಯಕತೆಗಳೊಂದಿಗೆ ಒದಗಿಸುತ್ತದೆ. ಇದು ರೈತರಿಗೆ, ವ್ಯಾಪಾರಿಗಳಿಗೆ, ಸಂಸ್ಕರಣಗಾರರಿಗೆ ಮತ್ತು ಸಾಗಾಟ ನಿರ್ವಾಹಕರಿಗೆ ವ್ಯವಹಾರ ಜಾಲದ ವೇದಿಕೆಯಾಗಿದೆ.

www.karunaduexams.com

## ಕೋಸ್ಟಲ್ ಬರ್ತ್ ಯೋಜನೆ ಅವಧಿ ವಿಸ್ತರಿಸಿದ ಕೇಂದ್ರ ಸರ್ಕಾರ



ಮಹತ್ವಕಾಂಕ್ಷಿ ಸಾಗರಮಾಲ ಯೋಜನೆಯಡಿ ಜಾರಿಗೊಳಿಸಲಾದ ಕೋಸ್ಟಲ್ ಬರ್ತ್ ಯೋಜನೆಯ ಅವಧಿಯನ್ನು ಮಾರ್ಚ್ 2020 ರವರೆಗೆ ಕೇಂದ್ರ ಬಂದರು ಸಚಿವಾಲಯ ವಿಸ್ತರಿಸಿದೆ. ಇದಲ್ಲದೆ, ಪ್ರಮುಖ ಬಂದರುಗಳಲ್ಲಿ ಕ್ಯಾಪಿಟಲ್ ಡ್ರೆಡ್ಜಿಂಗ್ ಮತ್ತು ವಿಸ್ತಾರವಾದ ಯೋಜನೆಯ ವರದಿಯನ್ನು (ಡಿಪಿಆರ್) ತಯಾರಿಸಲು ಕೋಸ್ಟಲ್ ಬರ್ತ್ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.  ಭಾರತವು 7500 ಕಿ.ಮೀ ಕರಾವಳಿ ತೀರವನ್ನು ಹೊಂದಿದ್ದು, ಆಂತರಿಕ ಸರಕು ಸಾಗಣೆಗೆ ಇದು ಪ್ರಮುಖ ಪಾತ್ರವಹಿಸಲಿದೆ

**ಪ್ರಮುಖಾಂಶಗಳು**:

- ಕೋಸ್ಟಲ್ ಬರ್ತ್ ಯೋಜನೆ ಎಂಟು ರಾಜ್ಯಗಳನ್ನು ಒಳಗೊಂಡಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ 12 ಯೋಜನೆಗಳು, ಆಂಧ್ರಪ್ರದೇಶ ಮತ್ತು ಗೋವಾದಲ್ಲಿ 10, ಕರ್ನಾಟಕದಲ್ಲಿ 6, ಕೇರಳ ಮತ್ತು ತಮಿಳುನಾಡಿನಲ್ಲಿ 3, ಗುಜರಾಜ್ 2 ಮತ್ತು ಪಶ್ಚಿಮ ಬಂಗಾಳದಲ್ಲಿ 1 ಯೋಜನೆ.
- 47 ಯೋಜನೆಗಳ ಪೈಕಿ ರೂ 1075.61 ಕೋಟಿಯ 23 ಯೋಜನೆಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಉಳಿದ 24 ಯೋಜನೆಗಳು ವಿವಿಧ ಹಂತದಲ್ಲಿವೆ.

**ಕೋಸ್ಟಲ್ ಬರ್ತ್ ಯೋಜನೆ:**

- ರಾಷ್ಟ್ರೀಯ ಜಲಮಾರ್ಗ ಅಥವಾ ಸಮುದ್ರದ ಮೂಲಕ ಸರಕು ಸಾಗಣಿಕೆ ಮಾಡಲು ಬಂದರುಗಳಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ರಾಜ್ಯ ಸರ್ಕಾರ ಅಥವಾ ಬಂದರುಗಳಿಗೆ ಹಣಕಾಸಿನ ಬೆಂಬಲವನ್ನು ಒದಗಿಸುವುದು ಯೋಜನೆಯ ಉದ್ದೇಶ. ಇದರಡಿ ಯೋಜನೆಯ ಶೇ 50% ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸಲಿದೆ.
- ಇದಲ್ಲದೆ ವಿಸ್ತಾರವಾದ ಯೋಜನೆಯ ವರದಿಯನ್ನು ಸಿದ್ದಪಡಿಸಲು ಸಹ ಕೇಂದ್ರ ಸರ್ಕಾರ ಹಣಕಾಸು ನೆರವು ನೀಡಲಿದೆ. ಉಳಿದ ಮೊತ್ತವನ್ನು ಸಂಬಂಧಿಸಿದ ಬಂದರುಗಳು ಅಥವಾ ರಾಜ್ಯ ಸರ್ಕಾರ ಭರಿಸಬೇಕು.
- ಯೋಜನೆಯ ಅಡಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳು ಕರಾವಳಿ ತೀರಾದಲ್ಲಿ ಬಂದರು ಮೂಲಕ ಸರಕು ಸಾಗಟ ಮಾಡಲು ಅನುಕೂಲ ಮಾಡಲಿವೆ. ಆ ಮೂಲಕ ರೈಲು ಮತ್ತು ರಸ್ತೆ ಸಾಗಣಿಕೆ ಮೇಲೆ ಅವಲಂಬನೆ ಕಡಿಮೆಗೊಳ್ಳಲಿದೆ.

www.karunaduexams.com

**ಸಾಗರಮಾಲ ಯೋಜನೆ:**

7500ಕಿ.ಮೀ ಉದ್ದದ ಕರಾವಳಿಯುದ್ದಕ್ಕೂ ಇರುವ ಬಂದರುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಬಂದರು ಕೇಂದ್ರಿತ್ವ ಅಭಿವೃದ್ಧಿಯನ್ನು ಉತ್ತೇಜಿಸಲು ಸಾಗರಮಾಲ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರಡಿ ಅಸ್ತಿತ್ವದಲ್ಲಿರುವ ಬಂದರುಗಳನ್ನು ಆಧುನಿಕ ವಿಶ್ವ ಮಾದರಿ ಬಂದರುಗಳನ್ನಾಗಿ ಮಾರ್ಪಡಿಸಲಾಗುವುದು ಮತ್ತು ಹೊಸ ಬಂದರುಗಳನ್ನು ಅಭಿವೃದ್ಧಿಪಡಿಸಲಾಗುವುದು. ಬಂದರು ಸಚಿವಾಲಯ ಯೋಜನೆಯ ನೊಡಲ್ ಸಚಿವಾಲಯ ಆಗಿದೆ.

ಸಾಗರಮಾಲ ಯೋಜನೆಯ ಮೂರು ಪ್ರಮುಖ ಅಂಶಗಳೆಂದರೆ ಬಂದರು ಆಧುನಿಕೀಕರಣ, ಸಮರ್ಥವಾಗಿ ಸ್ಥಳಾಂತರಿಸುವ ವ್ಯವಸ್ಥೆಮತ್ತು ಕರಾವಳಿ ಆರ್ಥಿಕ ಅಭಿವೃದ್ಧಿ.

**ನೀತಿ ಆಯೋಗದ ಉಪಾಧ್ಯಕ್ಷ ಹುದ್ದೆಗೆ ಅರವಿಂದ್ ಪನಗರಿಯಾ ರಾಜೀನಾಮೆ**



ನೀತಿ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೆ ಅರವಿಂದ್ ಪನಗರಿಯಾ ಅವರು ರಾಜೀನಾಮೆ ನೀಡಿದ್ದಾರೆ. ಮತ್ತೆ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಕಾರಣದಿಂದ ಹುದ್ದೆಗೆ ರಾಜೀನಾಮೆ ನೀಡಿರುವುದಾಗಿ ಪನಗರಿಯಾ ಹೇಳಿದ್ದಾರೆ. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿರುವ ಪನಗರಿಯಾ ಅವರ ಎರಡು ವರ್ಷ ರಜೆ ಅವಧಿಯನ್ನು ವಿಸ್ತರಿಸಲು ವಿಶ್ವವಿದ್ಯಾಲಯ ನಿರಾಕರಿಸಿರುವ ಹಿನ್ನೆಯಲ್ಲಿ ಸೆಪ್ಟೆಂಬರ್ 5ರಂದು ಮತ್ತೆ ಪ್ರಾಧ್ಯಪಕ ಹುದ್ದೆಗೆ ಮರಳಲಿದ್ದಾರೆ.

ಪನಗರಿಯಾ ಅವರನ್ನು ನೀತಿ ಆಯೋಗದ ಉಪಾಧ್ಯಕ್ಷರನ್ನಾಗಿ 2014ರ ಆಗಸ್ಟ್ ನಲ್ಲಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದರು. ಅವರು ಕ್ಯಾಬಿನೆಟ್ ಸಚಿವರ ಸ್ಥಾನವನ್ನು ಹೊಂದಿದ್ದರು.

**ಅರವಿಂದ್ ಪನಗರಿಯಾ:**

ನೀತಿ ಆಯೋಗ ಸೇರುವ ಮೊದಲು ಪನಗರಿಯಾ ಅವರು ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದರು ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕಿನಲ್ಲಿ (ಎಬಿಡಿ) ಮುಖ್ಯ ಅರ್ಥಶಾಸ್ತ್ರಜ್ಞರಾಗಿದ್ದರು. ವಿಶ್ವ ಬ್ಯಾಂಕ್, ವಿಶ್ವ ವಾಣಿಜ್ಯ ಕೇಂದ್ರ, ಅಂತಾರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ವಿವಿಧಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವವನ್ನು ಅವರು ಹೊಂದಿದ್ದಾರೆ. ಅವರು ಸುಮಾರು 10 ಪುಸ್ತಕಗಳನ್ನು ಬರೆದಿದ್ದಾರೆ. 2008 ರಲ್ಲಿ ಪ್ರಕಟವಾದ "ದಿ ಎಮರ್ಜಿಂಗ್ ಜೈಂಟ್" ಅವರ ಇತ್ತೀಚಿನ ಪುಸ್ತಕ. ಪನಗರಿಯಾ ಅವರಿಗೆ 2102ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ನೀತಿ ಆಯೋಗ**:

ನೀತಿ ಆಯೋಗ ಅಥವಾ ಭಾರತದ ಬದಲಾವಣೆಗಾಗಿನ ರಾಷ್ಟ್ರೀಯ ಸಂಸ್ಥೆ (ನ್ಯಾಷನಲ್ ಇನ್ಸ್ಟಿಟ್ಯೂಟಷನ್ ಫಾರ್ ಟ್ರಾನ್ಸ್ ಫಾರ್ಮಿಂಗ್ ಇಂಡಿಯಾ (NITI=National Institution for Transforming India)ವನ್ನು ಭಾರತದ ಯೋಜನಾ ಆಯೋಗದ ಬದಲಿಗೆ ಜನವರಿ 1, 2015ರಲ್ಲಿ ಸ್ಥಾಪಿಸಲಾಗಿದೆ. ಯೂನಿಯನ್ ಕ್ಯಾಬಿನೆಟ್ ನಿರ್ಣಯದ ಮೂಲಕ ನೀತಿ ಆಯೋಗವನ್ನು ಸ್ಥಾಪಿಸಲಾಗಿದೆ. ಇದು ಮುಖ್ಯವಾಗಿ ಭಾರತದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ನೀತಿ ರೂಪಣೆಯಲ್ಲಿ ಬೌದ್ಧಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

ಪ್ರಧಾನಿ ಅಧ್ಯಕ್ಷತೆಯ ನೀತಿ ಆಯೋಗದಲ್ಲಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಇರುತ್ತಾರೆ. ಒಬ್ಬ ಉಪಾಧ್ಯಕ್ಷ,ಓರ್ವ ಕಾರ್ಯನಿರ್ವಹಣಾಧಿಕಾರಿ ಜತೆಗೆ,ವಿವಿಧ ಕ್ಷೇತ್ರಗಳಲ್ಲಿ ತಜ್ಞರಾಗಿರುವ ಐದು ಜನ ಖಾಯಂ ಸದಸ್ಯರು, ಇಬ್ಬರು ಅರೆಕಾಲಿಕ ಸದಸ್ಯರು ಹಾಗೂ ನಾಲ್ವರು ಕೇಂದ್ರ ಸಚಿವರನ್ನು ಇದು ಹೊಂದಿದೆ.

**ಖ್ಯಾತ ದ್ರುಪದ್ ಗಾಯಕ ಉಸ್ತಾದ್ ಸಯೀದುದ್ದೀನ್ ಡಾಗರ್ ನಿಧನ**



ಖ್ಯಾತ ದ್ರುಪದ್ ಗಾಯಕ ಉಸ್ತಾದ್ ಸಯೀದುದ್ದೀನ್ ಡಾಗರ್ ಅವರು ನಿಧನರಾದರು. ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 78 ವರ್ಷ ವಯಸ್ಸಾಗಿತ್ತು. ಜೈಪುರದಲ್ಲಿ ಅವರ ಅಂತ್ಯಕ್ರಿಯೆ ನಡೆಯಲಿದೆ.

**ಉಸ್ತಾದ್ ಸಯೀದುದ್ದೀನ್ ಡಾಗರ್:**

ಉಸ್ತಾದ್ ಸಯೀಮುದ್ದೀನ್ ಡಾಗರ್ ಅವರು 1939 ಏಪ್ರಿಲ್ 29 ರಂದು ರಾಜಸ್ತಾನದ ಅಲ್ವಾರ್‌ನಲ್ಲಿ ಜನಿಸಿದರು. ಅವರು ಪ್ರಸಿದ್ದ ಡಾಗರ್ ಸಂಗೀತ ಮನೆತನದ ಸದಸ್ಯರಾಗಿದ್ದರು ಮತ್ತು ಖ್ಯಾತ ಏಳು 'ಡಾಗರ್ ಬಾಂಧಸ್ (ಸಹೋದರರು)' ರಲ್ಲಿ ಕಿರಿಯರಾಗಿದ್ದರು. ದ್ರುಪದ್ ಶೈಲಿಯನ್ನು ಜೀವಂತವಾಗಿರಿಸಲು ತಮ್ಮ ಜೀವನವನ್ನು ಸಮರ್ಪಿಸಿದ್ದರು. ದೇಶ ಮತ್ತು ವಿದೇಶದ ಪ್ರಸಿದ್ದ ಸ್ಥಳಗಳು ಮತ್ತು ಹಬ್ಬ ಉತ್ಸವಗಳಲ್ಲಿ ದ್ರುಪದ್ ಗಾಯನವನ್ನು ನಡೆಸಿಕೊಟ್ಟಿದ್ದರು.

ಉಸ್ತಾದ್ ಡಾಗರ್ ಅವರು ಜೈಪುರ ಮತ್ತು ಪುಣೆಯ ದ್ರುಪಡ್ ಸೊಸೈಟಿಯ ಅಧ್ಯಕ್ಷರಾಗಿದ್ದರು.

ಭಾರತದಲ್ಲಿ ದ್ರುಪದ್ ಕುರಿತು ಕಾರ್ಯಾಗಾರವನ್ನು

1939, ಎಪ್ರಿಲ್ 20ರಂದು ಅಲ್ವಾರ್ ನ ಖ್ಯಾತ ಶಾಸ್ತ್ರೀಯ ಗಾಯಕರ ಕುಟುಂಬದಲ್ಲಿ ಜನಿಸಿದ್ದ ಉಸ್ತಾದ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಕಾರವಾದ ದ್ರುಪದ್ ನಲ್ಲಿ ಖ್ಯಾತಿ ಗಳಿಸಿದ್ದರು.

www.karunaduexams.com

# ವಿಜ್ಞಾನ-ತಂತ್ರಜ್ಞಾನ

**<u>ಬ್ರಹ್ಮಾಂಡದ ಪುರಾತನ ಸುರುಳಿಯಾಕಾರದ ನಕ್ಷತ್ರಪುಂಜ ಪತ್ತೆ</u>**



ವಿಜ್ಞಾನಿಗಳು A1689B11 ಎಂದು ಕರೆಯಲ್ಪಡುವ ಅತ್ಯಂತ ಪುರಾತನ ಸುರುಳಿಯಾಕಾರದ ನಕ್ಷತ್ರಪುಂಜವನ್ನು ಕಂಡುಹಿಡಿದಿದ್ದಾರೆ. ವಿಶ್ವದಲ್ಲಿ ಇದುವರೆಗೆ ದಾಖಲಾಗಿರುವ ಅತ್ಯಂತ ಪುರಾತನ ನಕ್ಷತ್ರಪುಂಜ ಇದಾಗಿದೆ. ಹವಾಯಿಯ ಜೆಮಿನಿ ನಾರ್ತ್ ಟೆಲಿಸ್ಕೋಪ್ ಮೂಲಕ ಇನ್ಫ್ರಾರೆಡ್ ಇಂಟೆಗ್ರಲ್ ಫೀಲ್ಡ್ ಸ್ಪೆಕ್ಟ್ರೋಗ್ರಾಫ್ (ಎನ್ಐಎಫ್ಎಸ್) ನೊಂದಿಗೆ ಗುರುತ್ವಾಕರ್ಷಣೆಯ ಲೆನ್ಸಿಂಗ್ ಅನ್ನು ಸಂಯೋಜಿಸುವ ಶಕ್ತಿಯುತ ತಂತ್ರವನ್ನು ಬಳಸಿ ಇದನ್ನು ಪತ್ತೆ ಮಾಡಲಾಗಿದೆ.

- A1689B11 ನಕ್ಷತ್ರಪುಂಜವು 11 ಶತಕೋಟಿ ವರ್ಷಗಳ ಹಿಂದೆ ಜನಿಸಿದ್ದು, ಬಿಗ್ ಬ್ಯಾಂಗ್ ಆದ ನಂತರ ಕೇವಲ 2.6 ಶತಕೋಟಿ ವರ್ಷಗಳ ನಂತರ ಅಸ್ತಿತ್ವದಲ್ಲಿತ್ತು.
- A1689B11 ಬಹಳ ತಂಪಾದ ಮತ್ತು ತೆಳುವಾದ ಡಿಸ್ಕ್ ಹೊಂದಿದೆ, ಅದೇ ಯುಗದ ಇತರ ಗೆಲಕ್ಸಿಗಳಂತಲ್ಲದೆ ಆಶ್ಚರ್ಯಕರವಾಗಿ ಕಡಿಮೆ ಪ್ರಕ್ಷುಬ್ಧತೆಯೊಂದಿಗೆ ಶಾಂತವಾಗಿ ತಿರುಗುತ್ತದೆ.

**<u>ಸ್ವದೇಶಿ ನಿರ್ಮಿತ “ಸ್ಮಾರ್ಟ್ ಆಂಟಿ ಏರ್ಫೀಲ್ಡ್ ವೆಪನ್ (ಸಾವ್)” ಪರೀಕ್ಷೆ ಯಶಸ್ವಿ</u>**



ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್ಡಿಓ) ಸ್ಥಳೀಯವಾಗಿ ಅಭಿವೃದ್ಧಿ ಪಡಿಸಲಾಗಿರುವ ಲಘು ತೂಕದ ಗ್ಲೈಡ್ ಬಾಂಬ್ “ಸ್ಮಾರ್ಟ್ ಆಂಟಿ ಏರ್ಫೀಲ್ಡ್ ವೆಪನ್ (SAAW)”ನ ಪರೀಕ್ಷೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಒಡಿಶಾದ ಚಂಡಿಪುರದಲ್ಲಿ ವಿಭಿನ್ನ ಉಡಾವಣೆ ಪರಿಸ್ಥಿತಿಗಳು ಮತ್ತು ವ್ಯಾಪ್ತಿಯನ್ನು ಒಳಗೊಂಡ ಮೂರು ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ವಾಯುಪಡೆಯ ವಿಮಾನದಿಂದ ಬಾಂಬ್ ಅನ್ನು ಉಡಾಯಿಸಿ ನಿಖರ ಸಂಚರಣೆ ವ್ಯವಸ್ಥೆಯ ಮೂಲಕ ನಿಯಂತ್ರಿಸಲಾಯಿತು. 70ಕಿ.ಮೀ ವ್ಯಾಪ್ತಿಗೂ ಹೆಚ್ಚಿನ ಗುರಿ ತಲುಪುವಲ್ಲಿ ಯಶಸ್ವಿಯಾಯಿತು.

**ಪ್ರಮುಖಾಂಶಗಳು**:

- SAAW ಯೋಜನೆಯು 2013ರ ಸೆಪ್ಟೆಂಬರ್ ನಲ್ಲಿ ಸರ್ಕಾರವು ಅನುಮೋದಿಸಿದ ಭಾರತದ ಮೊದಲ ಸಂಪೂರ್ಣ ಸ್ವದೇಶಿ ವೈಮಾನಿಕ ಶಸ್ತ್ರಾಸ್ತ್ರ ಯೋಜನೆಯಾಗಿದೆ.

www.karunaduexams.com

- SAAW ಒಂದು ದೀರ್ಘ-ಶ್ರೇಣಿಯ ಹಗುರವಾದ ಹೆಚ್ಚು ನಿಖರ-ನಿರ್ದೇಶಿತ ವಿರೋಧಿ ವಾಯುನೆಲೆ ಶಸ್ತ್ರವಾಗಿದೆ. ಈ 120 ಕೆ.ಜಿ. ತೂಕದ ಸ್ಮಾರ್ಟ್ ಅಸ್ತ್ರವು 100 ಕಿ.ಮೀ ವ್ಯಾಪ್ತಿ ವರೆಗೆ ನಿಖರವಾಗಿ ಗುರಿಯನ್ನು ತಲುಪಬಲ್ಲದಾಗಿದೆ.
- SAAWನ ಆಳವಾಗಿ ನುಗ್ಗುವ ಸಾಮರ್ಥ್ಯ ಮತ್ತು ಹೆಚ್ಚಿನ ಸ್ಫೋಟಕ ಸಿಡಿತಲೆ ಸಾಮರ್ಥ್ಯದಿಂದ ಭಾರತದ ವಾಯುಪಡೆಗೆ (IAF) ಪೈಲಟ್ ಮತ್ತು ವಿಮಾನಕ್ಕೆ ಯಾವುದೇ ತೊಂದರೆಯಾಗದಂತೆ ಗಡಿಗಳಲ್ಲಿ ಸುಲಭವಾಗಿ ಶತ್ರುಪಡೆಯ ಮೇಲೆ ದಾಳಿ ನಡೆಸಬಹುದಾಗಿದೆ. ವಿವಿಧ ಯುದ್ಧವಿಮಾನಗಳಲ್ಲಿ ಇದನ್ನು ಅಳವಡಿಸಬಹುದಾಗಿದ್ದು, ಶೀಘ್ರವೇ ಸೇನೆಪಡೆಗಳಿಗೆ ಹಸ್ತಾಂತರಿಸಲಾಗುವುದು.

## ಕ್ರೀಡೆ

www.karunaduexams.com

## ರಾಜ್ಯದ ನೂತನ ಪೊಲೀಸ್ ಮಹಾ ನಿರ್ದೇಶಕರಾಗಿ ನೀಲಮಣಿ ರಾಜು ನೇಮಕ



ರಾಜ್ಯದ ನೂತನ ಪೊಲೀಸ್ ಮಹಾ ನಿರ್ದೇಶಕರಾಗಿ ನೀಲಮಣಿ ರಾಜು ರವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ನೀಲಮಣಿ ರಾಜು ರವರು ಈ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದ ಮೊದಲ ಮಹಿಳೆ ಎನಿಸಿದ್ದಾರೆ. ಪ್ರತಿಷ್ಠಿತ ಹುದ್ದೆಗೆ ನೀಲಮಣಿ ರಾಜು ಮತ್ತು ಎಚ್.ಸಿ. ಕಿಶೋರಚಂದ್ರ ನಡುವೆ ಪೈಪೋಟಿ ಏರ್ಪಟ್ಟಿತ್ತು.

- ನೀಲಮಣಿ ರಾಜು ರವರ ಸೇವಾ ಅವಧಿ 2020 ರ ಜ.ನವರಿ 31 ರವರೆಗೆ ಇದೆ.
- ನೀಲಮಣಿ ಅವರು ನಿವೃತ್ತ ಐಎಎಸ್ ಅಧಿಕಾರಿ ಡಿ.ಎನ್.ನರಸಿಂಹರಾಜು ರವರ ಪತ್ನಿ. ನರಸಿಂಹರಾಜು ರವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಧಾನ ಕಾರ್ಯದರ್ಶಿ ಆಗಿದ್ದರು. ಅನಂತರ ಮುಖ್ಯಮಂತ್ರಿ ಕಚೇರಿಯಲ್ಲೇ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿದ್ದರು. ಬಳಿಕ ರಾಜ್ಯ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿದ್ದರು.
- 1983 ನೇ ಬ್ಯಾಚ್‌ಗೆ (ಕರ್ನಾಟಕ ಕೇಡರ್) ಸೇರಿದ ಐಪಿಎಸ್ ಅಧಿಕಾರಿ ನೀಲಮಣಿ ಮೂಲತಃ ಉತ್ತರಾಖಂಡದ ರೂರ್ಕಿಯವರು.

## ಬೆಂಗಳೂರಿನಲ್ಲಿ ದೇಶದ ಮೊದಲ ಹೆಲಿಟ್ಯಾಕ್ಸಿ ಸೇವೆ



ದೇಶದ ಮೊಟ್ಟ ಮೊದಲ ಹೆಲಿಟ್ಯಾಕ್ಸಿ ಸೇವೆಗೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪರಿಚಯಿಸಲಾಯಿತು. ಕೇಂದ್ರ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಜಯಂತ್ ಸಿನ್ಹಾ ಈ ನೂತನ ಸೇವೆಯನ್ನು ಪ್ರಕಟಿಸಿದರು. ಈ ಸೇವೆಯಿಂದ ಟ್ರಾಫಿಕ್ ಕಿರಿಕಿರಿ ತಪ್ಪುವ ಕಾರಣ ದೇಶ ವಿದೇಶಗಳಿಂದ ಬೆಂಗಳೂರಿಗೆ ಆಗಮಿಸುವ ನಾಗರಿಕರಿಗೆ ವರದಾನ ಆಗಲಿದೆ.

- "ಸರ್ಕಾರ-ಖಾಸಗಿ ಸಹಭಾಗಿತ್ವದಲ್ಲಿ ಈ ಸೇವೆಯನ್ನು ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಪರಿಚಯಿಸಲಾಗಿದೆ.
- ಪ್ರಾಯೋಗಿಕವಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಎಲೆಕ್ಟ್ರಾನಿಕ್ ಸಿಟಿ ನಡುವೆ ಈ ಹೆಲಿಟ್ಯಾಕ್ಸಿ ಸೇವೆ ಆರಂಭಗೊಳ್ಳಲಿದೆ. ಈ ಸಂಬಂಧ ಈಗಾಗಲೇ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಹೆಲಿಕಾಪ್ಟರ್ ನಿಲ್ದಾಣ (ಏರ್‌ಪೋರ್ಟ್ ಮಾದರಿಯಲ್ಲಿ ಹೆಲಿಪೋರ್ಟ್)ಕ್ಕೆ ಜಾಗ ಗುರುತಿಸಲಾಗಿದ್ದು, ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಮುಂದಿನ ಮೂರು ತಿಂಗಳಲ್ಲಿ ಈ ಸೇವೆ ಶುರುವಾಗಲಿದೆ.

www.karunaduexams.com

- ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಬಿಐಎಎಲ್)ವು ಥುಂಬಿ ಏವಿಯೇಷನ್ ಪ್ರೈ.ಲಿ., ಸಹಯೋಗದಲ್ಲಿ "ಹೆಲಿಟ್ಯಾಕ್ಸಿ' ಸೇವೆಯನ್ನು ಪರಿಚಯಿಸಲಾಗುವುದು.
- ಬೆಂಗಳೂರಿನ 90 ಬಹುಮಹಡಿ ಕಟ್ಟಡಗಳ ಮೇಲ್ಛಾವಣಿಯಲ್ಲಿ ಹೆಲಿಪ್ಯಾಡ್‌ಗಳಿವೆ. ಇವುಗಳನ್ನು ಈಗ ಆರಂಭಿಸುತ್ತಿರುವ ಹೆಲಿಕಾಪ್ಟರ್ ಟ್ಯಾಕ್ಸಿ ಸೇವೆಗೆ ಬಳಸಿಕೊಳ್ಳಲಾಗುವುದು.
- 6 ಆಸನಗಳ ಸಾಮರ್ಥ್ಯ ಇರುವ "ಬೆಲ್-407' ಹೆಲಿಕಾಪ್ಟರ್‌ನಿಂದ ಸೇವೆ ಆರಂಭಗೊಳ್ಳಲಿದೆ.
- ಬ್ರೆಜಿಲ್, ಸಾವೊಪಾಲೊ ನಲ್ಲಿ ಈಗಾಗಲೇ ಹೆಲಿಟ್ಯಾಕ್ಸಿ ಸೇವೆ ಲಭ್ಯವಿದೆ. ಅಲ್ಲಿ 300 ಹೆಲಿಟ್ಯಾಕ್ಸಿಗಳು ಕಾರ್ಯಾಚರಣೆ ಮಾಡುತ್ತಿವೆ.

**ರಾಜ್ಯ ಸರ್ಕಾರದಿಂದ ಕ್ಷೇತ್ರಗಳ ದರ್ಶನಕ್ಕೆ "ಪುನೀತ ಯಾತ್ರೆ" ಯೋಜನೆ**

Department of Tourism
Government of Karnataka

ತೀರ್ಥಯಾತ್ರೆಗೆ ಹೋಗುವ ಎಲ್ಲ ಧರ್ಮ ಮತ್ತು ಜಾತಿಯವರಿಗೆ ಪ್ರೋತ್ಸಾಹಧನ ನೀಡಲು ರಾಜ್ಯ ಸರ್ಕಾರ 'ಪುನೀತ ಯಾತ್ರೆ' ಹೆಸರಿನ ಹೊಸ ಯೋಜನೆ ರೂಪಿಸಿದೆ. ಪ್ರವಾಸೋದ್ಯಮ ಇಲಾಖೆ ಮೂಲಕ ಈ ಯೋಜನೆಯನ್ನು ಸಿದ್ಧಪಡಿಸಿದ್ದು, ಅಂತಿಮ ಘೋಷಣೆ ಮಾತ್ರ ಬಾಕಿ ಇದೆ.

**ಪ್ರಮುಖಾಂಶಗಳು:**

- ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ) ಉಸ್ತುವಾರಿಯಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ.
- ನಿಗಮದ ಬಸ್‌ಗಳನ್ನೇ ಯಾತ್ರೆಗೆ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ.
- ಎಲ್ಲ ಧರ್ಮದ ಪುಣ್ಯಕ್ಷೇತ್ರಗಳನ್ನು ಒಳಗೊಂಡಂತೆ ರಾಜ್ಯ ಮತ್ತು ಹೊರ ರಾಜ್ಯಗಳ 21 ಮಾರ್ಗಗಳನ್ನು ಇಲಾಖೆ ಗುರುತಿಸಿದೆ.

**ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ "ಬಂಗಾರದ ಎಲೆಗಳು" ಯೋಜನೆ**



ರಾಜ್ಯದ ಎಲ್ಲ ಸಾಹಿತಿಗಳ ಪ್ರಾಥಮಿಕ ವಿವರಗಳನ್ನು ಹೊಂದಿರುವ ಸಮಗ್ರ ಕೋಶ ರಚಿಸಲು ಕರ್ನಾಟಕ ಸಾಹಿತ್ಯ ಅಕಾಡೆಮಿ "ಬಂಗಾರದ ಎಲೆಗಳು' ಎಂಬ ಮಹತ್ವದ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಿದೆ.

**ಪ್ರಮುಖಾಂಶಗಳು**:

- "ಬಂಗಾರದ ಎಲೆಗಳು' ಯೋಜನೆಯಡಿ ರಾಜ್ಯದ ಸರಿಸುಮಾರು ಎಲ್ಲ ಸಾಹಿತಿಗಳ ಪ್ರಾಥಮಿಕ ವಿವರಗಳನ್ನು ಸಮಗ್ರ ಕೋಶದಲ್ಲಿ ಅಳವಡಿಸಲಾಗುವುದು. ಮುಂದಿನ ಎರಡು ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಅಕಾಡೆಮಿ ಗುರಿ ಇಟ್ಟುಕೊಂಡಿದೆ.

- ಸಾಹಿತಿಗಳ ಸಮಗ್ರ ಕೋಶದಲ್ಲಿ ನವೋದಯ ಪೂರ್ವದ ಕೆಂಪು ನಾರಾಯಣನ ಮುದ್ರಾಮಂಜೂಷ ಕೃತಿಯಿಂದ ಪ್ರಾರಂಭಿಸಿ ಇಂದಿನ ಕಾಲದವರೆಗಿನ ಎಲ್ಲ ಲೇಖಕರ ಮಾಹಿತಿ ಒಳಗೊಂಡ ಪುಸ್ತಕ ಹೊರತರುವ ಉದ್ದೇಶವಿದೆ. 1820ರಿಂದ 2020ರವರೆಗಿನ ಎಲ್ಲ ಲೇಖಕರ ಪರಿಚಯ ಇದು ಒಳಗೊಂಡಿರುತ್ತದೆ. ಇದರಲ್ಲಿ ಲೇಖಕನ ಹುಟ್ಟಿದ ದಿನಾಂಕ, ಊರು, ಉದ್ಯೋಗ, ಕುಟುಂಬದ ಸಂಕ್ಷಿಪ್ತ ವಿವರ, ಪ್ರಕಟಿತ ಕೃತಿಗಳು, ಪ್ರಶಸ್ತಿಗಳು, ಸಂದ

www.karunaduexams.com

ಗೌರವಗಳು ಮತ್ತು ವ್ಯಕ್ತಿತ್ವದ ಕುರಿತು ಸಂಕ್ಷಿಪ್ತವಾಗಿ ನೀಡಲಾಗುವುದು. ಪ್ರಮುಖ ಕೃತಿಗಳ ಕುರಿತು ಒಂದೆರಡು ವಾಕ್ಯದ ವಿವರಣೆಯನ್ನೂ ನೀಡುವ ಆಲೋಚನೆ ಇದೆ. ಕನಿಷ್ಠ ಎರಡು ಕೃತಿ ಪ್ರಕಟಿಸಿದವರನ್ನು ಲೇಖಕರು ಎಂದು ಪರಿಗಣಿಸಲು ಚಿಂತಿಸಲಾಗಿದೆ. ಆದರೆ, ಅಕಾಡೆಮಿಯ ಸಭೆಯಲ್ಲಿ ಚರ್ಚಿಸಿ ಸ್ಪಷ್ಟ ನಿರ್ಧಾರಕ್ಕೆ ಬರುವುದಾಗಿ ಅವರು ಮಾಹಿತಿ ನೀಡಿದರು.

- - ರಾಜ್ಯದ ಯಾವುದೇ ಭಾಗದ ಲೇಖಕ ತಮ್ಮ ವೈಯುಕ್ತಿಕ ವಿವರಗಳು ಹಾಗೂ ತನಗೆ ಗೊತ್ತಿರುವ ನೆರೆಹೊರೆಯ ಲೇಖಕರ, ಈಗಾಗಲೇ ನಿಧನ ಹೊಂದಿರುವ ಲೇಖಕರು, ಸಾಹಿತಿಗಳ ಮಾಹಿತಿಗಳನ್ನು ಅಕಾಡೆಮಿಯ ಇ-ಮೇಲ್sahithya.academy@gmail.com ವಿಳಾಸಕ್ಕೆ ಕಳುಹಿಸ ಬಹುದು. ಎಲ್ಲ ಕಡೆಯಿಂದ ಮಾಹಿತಿ ಬಂದ ಬಳಿಕ ಯಾವ ಸಾಹಿತಿ, ಲೇಖಕರ ಪರಿಚಯವನ್ನ ಸಾಹಿತ್ಯ ಕೋಶದಲ್ಲಿ ನೀಡಬಹುದು ಎಂಬ ಮಾನದಂಡಗಳನ್ನು ನಿಗದಿಗೊಳಿಸಲಾಗುವುದು. ಸಾಹಿತಿಗಳ ಕೋಶದ ಮಾಹಿತಿ ಮುದ್ರಣ ರೂಪದಲ್ಲಿ ಹೊರತರುವುದರ ಜೊತೆಗೆ ಅಕಾಡೆಮಿಯ ವೈಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಮಾಲಗತ್ತಿ ವಿವರಿಸಿದರು.
- ಅಕಾಡೆಮಿಗೆ ಆಧುನಿಕ ಸ್ಪರ್ಶ: ಅರವಿಂದ ಮಾಲಗತ್ತಿ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಉನ್ನತೀಕರಿಸಲು ನಿರ್ಧರಿಸಲಾಗಿದ್ದು, ಅದರಂತೆ ಟ್ವಿಟರ್, ಫೇಸ್‌ಬುಕ್, ಗೂಗಲ್ ಪ್ಲಸ್‌ಗಳಲ್ಲಿ ಅಕಾಡೆಮಿಯ ಖಾತೆ ಹಾಗೂ ಪುಟ ತೆರೆಯಲಾಗುವುದು. ಅಕಾಡೆಮಿಯ ಯೋಜನೆಗಳನ್ನು ರೂಪಿಸಲು ಗಣ್ಯರು- ಸಾಹಿತಿಗಳು, ಲೇಖಕರು, ವಿಮರ್ಶಕರ ಸಭೆ ಕರೆದು ಸಮಾಲೋಚನೆ ನಡೆಸಲಾಗುವುದು. ಇದರ ಜತೆಗೆ ಯುವ ಬರಹಗಾರರ ಸಲಹೆಗಳನ್ನು ಪಡೆದುಕೊಳ್ಳಲಾಗುವುದು.
- ಅಕಾಡೆಮಿಯಲ್ಲಿ ಪತ್ಯೇಕ ಮಾರಾಟ ವಿಭಾಗ ತೆರೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಅರವಿಂದ ಮಾಲಗತ್ತಿ ಮಾಹಿತಿ ನೀಡಿದರು.ಸಹ ಸದಸ್ಯರ ನೇಮಕ: ಸರ್ಕಾರ ನೇಮಕ ಮಾಡಿದ ಸದಸ್ಯರಲ್ಲದೇ ಮೂವರು ಸಹ ಸದಸ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಅಕಾಡೆಮಿಗೆ ಇದೆ. ಅದರಂತೆ ಕಲಬುರಗಿಯ ವಿಕ್ರಂ ವಿಸಾಜಿ, ತುಮಕೂರಿನ ಶೈಲಾ ನಾಗರಾಜ್ ಹಾಗೂ ಮೈಸೂರಿನ ನೀಲಗಿರಿ ತಳವಾರ ಅವರನ್ನು ಅಕಾಡೆಮಿಯ ಸಹ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಾಲಗತ್ತಿ ತಿಳಿಸಿದರು.
-

Read more at http://www.udayavani.com/kannada/news/state-news/231178/golden-leaves-scheme-from-sahitya-akademi#X6AgLykyRs2YfZeB.99

www.karunaduexams.com

## ಇತರೆ: ಚೂರು ಪಾರು

- **ಟೊರಾಂಟೊದಲ್ಲಿ 14ನೇ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ:** 14ನೇ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ ನವೆಂಬರ್ 10 ಮತ್ತು 11ರಂದು ಟೊರಾಂಟೊದಲ್ಲಿ ನಡೆಯಲಿದೆ. ಮಂಗಳೂರಿನ ಹೃದಯವಾಹಿನಿ ಸಂಸ್ಥೆಯು ಟೊರಾಂಟೊದ ಕನ್ನಡ ಕಸ್ತೂರಿ ರೇಡಿಯೊ ಮತ್ತು ಕೆನಡಾದ ಬಿ.ವಿ. ನಾಗ್ ಕಮ್ಯೂನಿಕೇಷನ್ ಇಂಕ್ ಸಹಯೋಗದೊಂದಿಗೆ ಈ ಸಮ್ಮೇಳನವನ್ನು ಆಯೋಜಿಸಿದೆ.
- **ಗಿರೀಶ್ ಕಾರ್ನಾಡ್ ಅವರಿಗೆ 2017 ಟಾಟಾ ಲೈವ್ ಜೀವಮಾನ ಸಾಧನೆ ಪ್ರಶಸ್ತಿ:** ಹಿರಿಯ ನಟ ಹಾಗೂ ನಾಟಕ ರಚನೆಗಾರ ಗಿರೀಶ್ ಕಾರ್ನಾಡ್ ಅವರಿಗೆ 2017 ಟಾಟಾ ಲಿಟರೇಚರ್ ಲೈವ್! ಲೈಫ್ ಟೈಮ್ ಅಚೀವ್ಮೆಂಟ್ ಪ್ರಶಸ್ತಿ ಲಭಿಸಿದೆ.
- **ಭಾರತದ ಪಾಕಿಸ್ತಾನ ಹೈಕಮೀಷನರ್ ಆಗಿ ಅಜಯ್ ಬಿಸಾರಿಯಾ ನೇಮಕ:** ಹಿರಿಯ ರಾಯಭಾರಿ ಅಜಯ್ ಬಿಸಾರಿಯಾ ಪಾಕಿಸ್ತಾನಕ್ಕೆ ಭಾರತದ ಹೈ ಕಮಿಷನರ್ ಆಗಿ ನೇಮಕಗೊಂಡಿದ್ದಾರೆ. ಗೌತಮ್ ಬಾಂಬಾವಾಲೆ ಅವರು ಚೀನಾದ ರಾಯಭಾರಿಯಾಗಿ ನೇಮಕಗೊಂಡ ಕಾರಣ ಬಿಸಾರಿಯಾ ಅವರನ್ನು ಪಾಕಿಸ್ತಾನದ ಹೈಕಮೀಷನರ್ ಆಗಿ ನೇಮಕ ಮಾಡಲಾಗಿದೆ.
- **ಈಜಿಪ್ಟ್ ನಲ್ಲಿ 2017 ವಿಶ್ವ ಯುವ ವೇದಿಕೆ:** ಈಜಿಪ್ಟ್ನ ಶಾರಮ್ ಎಲ್ ಶೈಕ್ನಲ್ಲಿ 2017 ವಿಶ್ವ ಯುವ ವೇದಿಕೆ ನಡೆಯಿತು. 5 ದಿನದ ವೇದಿಕೆಯನ್ನು ಈಜಿಪ್ಟ್ ಅಧ್ಯಕ್ಷ ಶ್ರೀ ಅಬ್ದೇಲ್ ಫಟ್ಟಾ ಎಲ್-ಸಿಸಿ ಅವರು ಉದ್ಘಾಟಿಸಿದರು. ಭಾರತದಿಂದ, ಯುವ ವ್ಯವಹಾರ ಮತ್ತು ಕ್ರೀಡೆಗಳ ರಾಜ್ಯ ಸಚಿವ ರಾಜ್ಯವರ್ಧನ್ ರಾಥೋರ್ ಅವರು ವೇದಿಕೆಯಲ್ಲಿ ಪಾಲ್ಗೊಂಡಿದ್ದರು.
- **BRO ದಿಂದ ವಿಶ್ವದ ಅತಿ ಎತ್ತರದ ಮೋಟಾರ್ ರಸ್ತೆ**: ಗಡಿ ರಸ್ತೆಗಳ ಸಂಸ್ಥೆ(ಬಿಆರ್ಒ) ಜಮ್ಮು ಮತ್ತು ಕಾಶ್ಮೀರದ ಲಡಾಖ್ ಪ್ರದೇಶದಲ್ಲಿ ವಿಶ್ವದ ಅತಿ ಹೆಚ್ಚು ಎತ್ತರದ ಮೋಟಾರು ವಾಹನ ರಸ್ತೆಯನ್ನು ನಿರ್ಮಿಸಿದೆ. ಉಮಿಂಗ್ಲಾ ಟಾಪ್ ಮೂಲಕ ಸಾಗುವ 86 ಕಿಮೀ ಉದ್ದದ ರಸ್ತೆಯನ್ನು 19,300 ಅಡಿ ಎತ್ತರದಲ್ಲಿ ನಿರ್ಮಿಸಲಾಗಿದೆ.

www.karunaduexams.com